
ಕಲ್ಯಾಣ ಕಿರಣ

ಜುಲೈ-2010

ಬೆಲೆ ರೂ.10.00





ದೆಹಲಿ ದಕ್ಷಿಣ ವಲಯದ ಉಪ ಪೋಲೀಸ್ ಆಯುಕ್ತ ಶ್ರೀ ಸುಭಾಷ್‌ಚಂದ್ರ ಗುಪ್ತಾ ಅವರಿಂದ ಧ್ವಜಾರೋಹಣ

ನವದೆಹಲಿಯ ಬಸವ ಮಂಟಪದಲ್ಲಿ ಚನ್ನಬಸವೇಶ್ವರ ಜ್ಞಾನ ಪೀಠಾರೋಹಣ ಮಾಡಿದ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳಿಗೆ ದಿ.4-3-2010ರಂದು ಅಭಿನಂದನೆ.



|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-40	ಬಸವ ಶಕೆ -877	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-7	ಜುಲೈ-2010	ವಾರ್ಷಿಕ ಚಂದಾ 100/- ರೂ.

ಬಸವ ಚರಣಕೆ ನುಡಿನೈವೇದ್ಯ

- ಮಾತಾಜಿ

ಗುರು ಬಸವ ಎನ್ನ ಹೃನ್ಮಂದಿರದಿ ನೀ ನೆಲೆಸು
ಶರಣುಗತಿ ಭಾವದಿಂ ನಾ ನಿನ್ನ ಅರ್ಚಿಪೆನು || ಪ ||

ಎನ್ನ ಜೀವನ ಫಲವು ನಿನಗೆ ಎಡೆಯಾಗಿಹುದು
ಸ್ವೀಕರಿಸಿ ಸಲಹೌ ಮಮಬಾಳ ಬಂಧು || ಅ.ಪ ||

ಮಲಿನವಾಗದ ಜಲವ ತರಲಾರೆ ನಾನು
ಭಕ್ತಿಧಾರೆಯ ಹರಿಸಿ ಪಾದವನು ತೊಳೆವೆ ||
ಭೌತಿಕ ಬೆರಣಿಯನು ಸುಟ್ಟು ಬೂದಿಯ ಬಳಿಯೆ
ನೀಃಕಾಮದಾ ಭಸಿತ ಮನ ತುಂಬಿ ಪೂಸುವೆ || 1 ||

ಮೀಸಲಳಿಯದ ಕುಸುಮ ತರುವುದೆಂತೈ ತಂದೆ
ಸದ್ಭಾವ ಸುಮಗಳನು ಚರಣಕ್ಕೆ ಏರಿಸುವೆ
ಕಾನನದಿ ಬೆಳೆದಿಪ್ಪ ಚಂದನದ ಲೇಪನಕಿಂ
ಅಂತರಂಗದ ಶಾಂತಿ ನಿನ್ನಡಿಗೆ ಲೇಪಿಸುವೆ || || 2 ||

ಅಕ್ಕಿಯ ಕಾಳುಗಳ ಅಕ್ಷತೆಯಾಗಿ ಸಲಿಸುವೆನೆ
ಸದ್ಗುಣದ ಸಂಚಯವು ನಿನಗೆ ಅಕ್ಷತೆಯು
ಕರ್ಪೂರದಾರತಿಯ ಬೆಳಗುವುದು ತರವೆ?
ಅರಿವಿನಾ ಆರತಿಯ ಕೈಮುಟ್ಟಿ ಬೆಳಗುವೆ || || 3 ||

ಕಲ್ಲುಸಕ್ಕರೆ ಎಡೆಯ ಅರ್ಪಿಸಲು ನಾಚುವೆನು
ಅರ್ಪಣೆಯ ನೈವೇದ್ಯ ದೃಢಮನದಿ ಸಲಿಸುವೆನು
ನನ್ನದೆನುವುದೇನಿಲ್ಲ ಎಲ್ಲ ನಿನ್ನಯ ಕೊಡುಗೆ
ತವ ದಾನ ನಿನಗಿತ್ತು ಅರ್ಪಣೆಯ ಹಮ್ಮೇಕೆ? || 4 ||

ನೀನುಡಿಸಿದೊಲು ನುಡಿವೆ ನೀನಿರಿಸಿದೊಲು ಇರುವೆ
ನಿನ್ನ ಕೈಯೊಳಗಿರುವ ಜಂತ್ರ ಬೊಂಬೆಯು ನಾನು
ಬಾಳ ವೈಣಿಕ ನೀನು ವೀಣೆ ನಾನೆಂದರಿದು
ಸಲ್ಲಿಸುವೆ ಮಮಬಾಳ ಸಚ್ಚಿದಾನಂದ ಕಂದ || 5 ||

ಅಪ್ಪುವನಪ್ಪಿದ ವಾರಿಕಲ್ಲಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹಿ ಎನ್ನಬಹುದೆ?
ಅನಲನಪ್ಪಿದ ಕರ್ಪೂರದಂತೆ, ಕೂಡಲ ಚನ್ನ ಸಂಗಯ್ಯ
ನಿಮ್ಮ ಶರಣ ಬಸವಣ್ಣನ ನಿಲುವು. -ಚನ್ನಬಸವಣ್ಣನವರು

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಮುಖ ಪುಟ: ವಿಶ್ವಗುರು ಬಸವಣ್ಣನವರು

ಹಿಂಬದಿಯ ಮುಖಪುಟ : ಇಷ್ಟಾಮರಣಿ ನೀಲಾಂಬಿಕಾದೇವಿ

ಹೊದ್ದಿಕೆಯ 2ನೇ ಪುಟ : ನವದೆಹಲಿಯ ಬಸವ ಮಂಟಪದಲ್ಲಿ ಚನ್ನಬಸವೇಶ್ವರ ಜ್ಞಾನ ಪೀಠಾರೋಹಣ ಮಾಡಿದ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳಿಗೆ ದಿ.4-3-2010ರಂದು ಅಭಿನಂದನೆ.

ಹೊದ್ದಿಕೆಯ 3ನೇ ಪುಟ : ಸತ್ನಾಮ್ ಸಿಂಗ್ ಉಪ್ಪಲ್ ಮತ್ತು ಮೋಹನ್ ದಾಸ್ ವಿಲಾಸವತಿ ದಾಸ್ ಅವರಿಂದ ಸತ್ಕಾರ

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 8970898205, 7760627640, 8892912123

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ವಿಶ್ವಗುರು ಬಸವಣ್ಣನವರ 815ನೆಯ ಲಿಂಗೈಕ್ಯ ಸಂಸ್ಮರಣೆ



ಶರಣ (ಶನಿ)ವಾರ ದಿ. 14-08-2010 ರಂದು

ಬೆಳಿಗ್ಗೆ 10-30

ಬೆಂಗಳೂರು ನಗರದ

ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ

ಸರ್ ಕೆ.ಪಿ.ಪುಟ್ಟಣ್ಣಚೆಟ್ಟಿ (ಟೌನ್ ಹಾಲ್)

ಪುರಭವನದಲ್ಲಿ

ಶರಣರ ಬರುವೆಮಗೆ ಪ್ರಾಣ ಜೀವಾಳ

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 815ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ: ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನ, ಬೆಂಗಳೂರು,

ದಿ.14-8-2010, ಬೆಳಿಗ್ಗೆ .10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30-4-1134) 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ) ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "**ಬಸವ ಪಂಚಮಿ**" ಎಂದು ಖ್ಯಾತಿವೆತ್ತಿದೆ. ಈ ವರ್ಷ 815ನೆಯ ಲಿಂಗೈಕ್ಯ ದಿನವು ಶರಣ(ಶನಿ) ವಾರ ದಿ.14-8-2010ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 815ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ಹಾಲು ಹಣ್ಣು ವಿತರಣೆ

ನಾಗರ ಪಂಚಮಿ ಎಂದು ಹುತ್ತಕ್ಕೆ, ನಾಗರ ಕಲ್ಲಿಗೆ ಹಾಲು ಎರೆಯುವ ಮೂಢ ಸಂಪ್ರದಾಯ ಬಿಟ್ಟು ಮಾನವೀಯ ಕಾರ್ಯಕ್ಕೆ ಅದನ್ನು ಬಳಸಬೇಕೆಂದು ರಾಷ್ಟ್ರೀಯ ಬಸವ ದಳದ ವತಿಯಿಂದ ಕೆ.ಸಿ.ಜನರಲ್ ಮತ್ತು ಕುಷ್ಠರೋಗಿಗಳ ಆಸ್ಪತ್ರೆಯಲ್ಲಿ ದಿ.14-8-2010ರಂದು ಹಣ್ಣು- ಹಾಲು ವಿತರಿಸುವ ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕಗಳನ್ನು ಏರ್ಪಡಿಸಲಾಗುವುದು. ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕಗಳು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿವೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ದಿನಗಳ ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣ ಪ್ರಸಾದ (ಭೋಜನ) ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ದಿ. 14ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 815ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ (ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3 ರಿಂದ 3-30
4. 3-30ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ. ಪುಟ್ಟಣ್ಣ ಚೆಟ್ಟಿ ಟೌನ್‌ಹಾಲ್‌ದಿಂದ ಹೊರಟು ನಗರ್ತರ ಪೇಟೆ, ಅವೆನ್ಯೂ ರಸ್ತೆ ಮಾರ್ಗವಾಗಿ ಸಾಗಿ ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು. ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು ಬೆನ್ನ ಮೇಲೆ ಬಸವ ರಕ್ಷೆ(ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿ ಚಕ್ರ ವಾಹನಗಳಿಗೆ ಬಸವ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲು ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ -ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದನ್ನೇ ನೇರ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು, ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ನೀಲಾಂಬಿಕಾ ಷಷ್ಠಿ - ದಿ.15-8-2010ರಂದು

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣಿಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ. 15-8-2010ರಂದು 815ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30 ರಿಂದ ಬೆಂಗಳೂರಿನ ರಾಜಾಜಿನಗರದ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಇದೆ.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಬಸವ ಮಂಟಪಕ್ಕೆ ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251, 80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ,
ಬೆಂಗಳೂರು-10
ದೂರವಾಣಿ : 080- 23131476

****

ಸಂಪಾದಕೀಯ: - ಮಾತಾಜಿ

ಸನ್ಯಾಸಿನಿಯ ಪೀಠ ತ್ಯಾಗ ?

ಜುಲೈ ತಿಂಗಳ ಮೊದಲ ವಾರದಲ್ಲಿ ಬಹುವಾಗಿ ಸುದ್ದಿ ಮಾಡಿದ ಘಟನೆ ಚಿತ್ರದುರ್ಗ (ಸಿರಸಿ) ಮಠದ ನಿವೇದಿತಾಳ ವಿವಾಹ. ಸಾಮಾನ್ಯವಾಗಿ ಇಂಥ ಘಟನೆಗಳು ನಡೆಯುತ್ತಲೇ ಇರುತ್ತವೆ. ಮುರುಘಾ ಮಠದ ಶ್ರೀಗಳು ಕಾವಿ ಕೊಟ್ಟಿದ್ದ ಇನ್ನೊಬ್ಬ ಹುಡುಗ ಸಹಿತ ಈಗೆರಡು ತಿಂಗಳ ಹಿಂದೆ ಮದುವೆಯಾದ. ಇದೇನು ದೊಡ್ಡ ವಿಷಯವಲ್ಲ, ಮಹಾನ್ ತ್ಯಾಗವೂ ಅಲ್ಲ. ಕೆಲವೊಮ್ಮೆ ಸ್ವಯಂ ಪ್ರೇರಣೆಯಿಂದ ಸನ್ಯಾಸ ಮಾರ್ಗಕ್ಕೆ ಬಂದು, ಅಪಾರ ಆಸಕ್ತಿಯಿಂದ ಜಂಗಮ ದೀಕ್ಷೆಯನ್ನು ಪಡೆದು ನಂತರ ಈ ಮಾರ್ಗದಲ್ಲಿ ಜಯಿಸಲಾರದೆ ಸೋತು ಪೂರ್ವಾಶ್ರಮ ವನ್ನು ಸೇರಿದವರು ಸಾಕಷ್ಟು ಜನ. ಇನ್ನು ಚಿತ್ರದುರ್ಗ ಶ್ರೀಗಳ ಕಾವಿ ದಾನವಂತೂ ಬಲು ವಿಶೇಷ. ಅವರು ಕಾವಿಯನ್ನು ಸಾಧಕರ ಸಮವಸ್ತ್ರವಾಗಿಯೇ ಮಾಡಿದಂತೆ ಕಾಣುತ್ತದೆ. ಮಠದೊಳಕ್ಕೆ ಪ್ರವೇಶ ಮಾಡುತ್ತಿದ್ದಂತೆಯೇ ಕಾವಿಯನ್ನು ತೊಡಿಸುವರು ಅಂತ ಕೇಳಿದ್ದೇನೆ. ಇಷ್ಟವಿಲ್ಲದವರಿಗೂ ಒತ್ತಾಯ ಪೂರ್ವಕವಾಗಿ ಸನ್ಯಾಸವನ್ನು ಕೊಡುವರಂತೆ. ಅದೇ ರೀತಿ ಇಷ್ಟವಿಲ್ಲದಿದ್ದ ನಿವೇದಿತಾಳಿಗೂ ಸನ್ಯಾಸವನ್ನು ಕೊಟ್ಟಿದ್ದಾರೆ. ಹೀಗಾಗಿ ಆಕೆ ಚೇತನ ಎಂಬ ತನಗಿಂತಲೂ ಕಿರಿಯನಾದ ತರುಣನನ್ನು ಕಾಣುತ್ತಲೇ ಮೋಹಿತಳಾಗಿದ್ದಾಳೆ. ಮುರುಘಾ ಶ್ರೀಗಳಿಗೆ ತನ್ನ ಅಂತರಂಗದ ಅಭೀಪ್ಸೆಯನ್ನು ತಿಳಿಸಿಯೇ ಸನ್ಯಾಸವನ್ನು ತೊರೆದು, ಹೋಗಿ ವಿವಾಹಿತಳಾಗಿದ್ದಾಳೆ.

ಇದೇನು ದೊಡ್ಡ ಮತ್ತು ಅಸಾಮಾನ್ಯ ವಿಷಯವಲ್ಲ, ಮತ್ತು ದೊಡ್ಡ ಸಾಧನೆಯೂ ಅಲ್ಲ. ನಡೆಯುವಾತ ಮುಗ್ಗರಿಸುವುದು ಅಸಾಮಾನ್ಯ ಸಾಧನೆಯಲ್ಲ. ಆದರೆ ಪತ್ರಿಕೆಗಳು ಮತ್ತು ಟಿ.ವಿ.ಚಾನಲ್‌ಗಳು ಅನಗತ್ಯ ಪ್ರಚಾರವನ್ನು ಕೊಟ್ಟುದು ಅವಿವೇಕ ರಮಣೀಯ. ನಿವೇದಿತಾಳ ಆದರ್ಶ ಮಠಾಧೀಶರಿಗೆ ಮಾದರಿ ಎನ್ನುವಷ್ಟು ಅತಿರೇಕದ ಮಾತನ್ನು ಪ್ರಮುಖ ಪತ್ರಿಕೆಗಳು ಬರೆದವು. "ಭಕ್ತನ ಮನ ಹೆಣ್ಣಿನೊಳಗಾದರೆ ವಿವಾಹವಾಗಿ ಕೊಡುವುದು, ಮಣ್ಣಿನೊಳಗಾದರೆ ಕೊಂಡು ಆಲಯವ ಮಾಡುವುದು." ಎಂದು ಶ್ರೀ ಸಿದ್ದರಾಮೇಶ್ವರರು ಹೇಳುತ್ತಾರೆ. ಆದಿ ಶರಣರು ಈ ಬಗ್ಗೆ ಉದಾರವಾದಿಗಳು. ಸನ್ಯಾಸವಾಗಲೀ, ಸಾಂಸಾರಿಕ ಜೀವನವಾಗಲೀ ಸ್ವಯಂ ಪ್ರೇರಣೆಯಿಂದ ಸ್ವೀಕರಿಸಬೇಕು. ಒತ್ತಾಯದ ಸನ್ಯಾಸವಾಗಲಿ, ಒತ್ತಾಯದ ಮದುವೆಯಾಗಲಿ ಮನೋವೈಜ್ಞಾನಿಕವಾಗಿ ಸರಿಯಲ್ಲ.

ಸಿರಸಿಯು ಒಂದು ಮಠ ಮಾತ್ರ, ಅದು ವಿಧ್ಯುಕ್ತ ಧರ್ಮಪೀಠವಲ್ಲ. ಪತ್ರಿಕೆಗಳು ಸನ್ಯಾಸಿಯ ಪೀಠ ತ್ಯಾಗ ಎಂದು ಬಹುದೊಡ್ಡ ಗದ್ದಲ ಮಾಡಿದವು. ಇದರಿಂದ ಮೌನವಾಗಿ ಗೃಹಸ್ಥ ಜೀವನ ನಡೆಸಲು ಬಯಸಿದ್ದ ದಂಪತಿಗಳ ಮೇಲೆ ಎಲ್ಲರ ಕಣ್ಣು ಬಿದ್ದು, ಅವರೂ ಮುಜುಗರ ಪಟ್ಟರಲ್ಲೂ ಸಾಕು. ಒಳ್ಳೆಯ, ವಿಧಾಯಕ ಸುದ್ದಿಗಳಿಗೆ ಪ್ರಚಾರಕೊಡದೆ ಇರುವ ಪತ್ರಿಕೆಗಳು ಇಂಥ ಕ್ಷುಲ್ಲಕ ವಿಷಯಕ್ಕೆ ಅಬ್ಬರದ ಪ್ರಚಾರಕೊಟ್ಟದ್ದು ಹಾಸ್ಯಾಸ್ಪದವೇ ಸರಿ!

Thus Spake Basava

God is world' kin

No body is for anybody, So!
The fallen have no friend!
Thou only, Lord Lingadeva,
Art the world's kin!

ಬರಗೂರು ಪೂರ್ವಾಗ್ರಹ ಪೀಡಿತ ದೃಷ್ಟಿಕೋನ

ಬಸವಣ್ಣನವರ ಕಾಲದಲ್ಲಿ ಎಲ್ಲವೂ ಆಗಿತ್ತೆ? ಎಂಬ ಒಂದು ಲೇಖನ ಬರಗೂರು ರಾಮಚಂದ್ರಪ್ಪ ಅವರು ಬರೆದುದು ದಿ. 23-5-2010ರ ಪ್ರಜಾವಾಣಿಯಲ್ಲಿ ಪ್ರಕಟಗೊಂಡಿತು. ನಾಡಿನಾದ್ಯಂತ ಸಂಚಲನವನ್ನು ಉಂಟು ಮಾಡಿದ ಈ ಲೇಖನಕ್ಕೆ ಸಾಕಷ್ಟು ರೀತಿಯಿಂದ, ಸಾಕಷ್ಟು ದಿಕ್ಕಿನಿಂದ ಪ್ರತಿಕ್ರಿಯೆಗಳು ಬಂದು ಪ್ರಜಾವಾಣಿಯಲ್ಲೇ ಪ್ರಕಟಗೊಂಡವು.

ಬರಗೂರು ರಾಮಚಂದ್ರಪ್ಪನವರ ಬರಹ ಓದಿದ ಮೇಲೆ ಅವರು ಸಾಕಷ್ಟು ಬಸವಾದಿ ಪ್ರಮಥರ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿದ್ದಾರೆ ಎನ್ನಿಸುವುದಲ್ಲದೆ ವಚನ ಸಾಹಿತ್ಯವನ್ನು ಮತ್ತು ಗುರು ಬಸವಣ್ಣನವರ ಸಾಧನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎನ್ನಿಸುವುದು. ಗುರು ಬಸವಣ್ಣನವರ ಕೊಡುಗೆಯ ಫಲ ಲಿಂಗಾಯತ ಧರ್ಮ. ಅದರ ಅನುಯಾಯಿತ್ವದಿಂದ ಹುಟ್ಟಿದ್ದು ಲಿಂಗಾಯತ ಸಮಾಜ. ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ ಈ ಮೂರು ಮೌಲ್ಯಗಳನ್ನು ಜಾತಿ, ವರ್ಣ, ವರ್ಗ, ಲಿಂಗ ಭೇದ ರಹಿತವಾಗಿ ಎಲ್ಲರಿಗೂ ಕೊಡಲೋಸುಗ ವಾಗಿಯೇ ಗುರು ಬಸವಣ್ಣನವರು ಕೊಟ್ಟ ಈ ಧರ್ಮದ ಅಡಿಪಾಯದ ಮೇಲೆ ಕಟ್ಟಲ್ಪಡ ಬೇಕಾಗಿದ್ದ ಲಿಂಗಾಯತ ಸಮಾಜ ಆ ಆದರ್ಶಗಳ ಚೌಕಟ್ಟಿನಲ್ಲಿ ರೂಪುಗೊಳ್ಳದೆ ಪುನಃ ಪುರೋಹಿತಶಾಹಿಯ ಮೇಲೆ ನಿಂತ ಸೋರಿಕೆಯ ಮನೆಯಾಗಿದೆ. ಧರ್ಮಗುರು ಬಸವಣ್ಣನವರು ಬೇಡವೆಂದು ಗುಡಿಸಿ, ಆಚೆಗೆ ಎಸೆದಿದ್ದ ವೈದಿಕ ಶಾಹಿಯ ಹಳೆಯ ಕೊಳೆಯನ್ನೆಲ್ಲ ಪುನಃ ಒಳಸೇರಿಸಿಕೊಂಡಿದೆ. ಹೀಗಾಗಿ ಲಿಂಗಾಯತ ಸಮಾಜವು ಗುರು ಬಸವಣ್ಣನವರ ಮತ್ತು ಅವರ ಸಮಕಾಲೀನ ಶರಣರ ಆಶೋತ್ತರಗಳನ್ನು ಪೂರೈಸುವಂತೆ ರೂಪುಗೊಂಡಿಲ್ಲ. ಇದು ಆದಿ ಶರಣರ ತಪ್ಪಲ್ಲ. ಕೆಲವು ಲಿಂಗಾಯತರು ಜಾತಿವಾದಿಗಳಾದ ಮಾತ್ರಕ್ಕೆ ಬಸವಾದಿ ಪ್ರಮಥರನ್ನು ಜಾತಿವಾದಿಗಳು ಎನ್ನುವುದು ಅಧರ್ಮವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆಲವು ವಿಚಾರವಾದಿಗಳು ಗುರು ಬಸವಣ್ಣನವರನ್ನೇ ದ್ವೇಷಿಸುತ್ತಾರೆ. ಇಂದು ಸಮಾಜದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ 3 ಬಗೆಯ ಜನರನ್ನು ಗುರುತಿಸ ಬಹುದು. ಲಿಂಗಾಯತ ಸಮಾಜವನ್ನು ಅದಕ್ಕೆ ಜನ್ಮ ನೀಡಿದ ಗುರು ಬಸವಣ್ಣನವರನ್ನು ಉಭಯವನ್ನೂ ದ್ವೇಷಿಸುವ ವರ್ಗ; ಲಿಂಗಾಯತ ಸಮಾಜವನ್ನು ಇಷ್ಟಪಡದೆ ಇದ್ದರೂ ಗುರು ಬಸವಣ್ಣನವರನ್ನು ಆದರಿಸುವ, ಗೌರವಿಸುವ ವರ್ಗ. ಗುರು ಬಸವಣ್ಣನವರನ್ನು ಮತ್ತು ಲಿಂಗಾಯತ ಸಮಾಜವನ್ನು ಉಭಯವನ್ನೂ ಆದರಿಸುವ ವರ್ಗ.

ಬರಗೂರು ರಾಮಚಂದ್ರಪ್ಪನವರಂಥ ಮೊದಲನೆಯ ವರ್ಗಕ್ಕೆ ಸೇರುತ್ತಾರೆ. ಲಿಂಗಾಯತ ಸಮಾಜ ಹೊಂದಿರುವ ಸಂಕುಚಿತ ಮನೋಭಾವವನ್ನು ಬಸವಣ್ಣನವರ ತಲೆಗೇ ಕಟ್ಟುವ ಸಣ್ಣತನ ಅವರದು. ಸ್ವಭಾವತಃ ನಾಸ್ತಿಕ ವಿಚಾರಧಾರೆಯವರಾದ ಅವರಿಗೆ ದೇವರು, ಧರ್ಮದ ತಳಹದಿಯ ಮೇಲೆ ರೂಪುಗೊಂಡ ಬಸವ ಸಿದ್ಧಾಂತ ಹಿಡಿಸುವುದಾದರೂ ಹೇಗೆ ಸಾಧ್ಯ? ಹೀಗಾಗಿ ಅನೇಕ ವಿದ್ವಾಂಸರು, ಅನುಭಾವಿಗಳೂ ಹೇಳುವ ಅಭಿಮಾನದ ಮಾತುಗಳು ಬರಗೂರರಿಗೆ ವಚನ ಚಳುವಳಿಯ ವೈಭವೀಕರಣವಾಗಿ, ಅದರಲ್ಲಿ ಹಸಿಹಸಿಯಾದ ಹುಸಿಯಾಗಿ ತೋರುತ್ತದೆ.

"Whatever legend may say about Basava, The fact is fully clear that he is the first Indian free thinker. He can be called the Martin Luther of India." ಎನ್ನುತ್ತಾರೆ ಬ್ರಿಟಿಷ್ ವಿದ್ವಾಂಸರಾದ ಆರ್ಥರ್

ಮೈಲ್ಸ್. " It is no exaggeration to say that the message of Basava is like a reservior into which all previous thoughts flowed in,and from whuch all later thoughts flowed out. Kind like Buddha, simple like Mahavir, compassionate like Jesus, bold like Mohammad, Basava strikes us almost as a wonder of creation. But what attracts us most to him, are those teachings of his in which he anticipated the greatest of modern thinkers - Karl Marx and Mahatma Gandhi."- Prof.R.K.Srikanthan.

" It has not been posible for me to practise of Basaveshwara which he taught 800 years ago and which he also practised. I have adopted a few of them. I am yet a seeker in this aspect and not an accomplished one. Eradication of untouchability and dignity of labour were among his core precepts. One does not find even shades of casteism in him.

Had he lived during our times, he would have been a saint worthy of worship. If you, his followers, practise his precepts, you could uplift not just Bharat but the world."

- Mahatma Gandhiji, Father of Nation
exhortation at the 1924 Belgaum Congress Session

ಇವೆಲ್ಲವೂ ನಾನಾ ವಿದ್ವಾಂಸರು ಹೇಳಿದ ಮಾತುಗಳು. ಇವರೆಲ್ಲರಿಗಿಂತಲೂ ಬರಗೂರು ರಾಮಚಂದ್ರಪ್ಪ ಶಾಣ್ಯಾರೆ? ಅವರೆಲ್ಲ ಇವರಿಗಿಂತ ದಡ್ಡರೆ?

ಬರಗೂರರ ಸಮಸ್ಯೆ ಬಸವಣ್ಣನವರ ಕಾಲದಲ್ಲಿ ಎಲ್ಲವೂ ಆಗಿತ್ತೆ? ಎನ್ನುವುದು ಮತ್ತು 800 ವರ್ಷಗಳ ಹಿಂದೆಯೇ ಆಗಿ ಹೋದ ಬಸವಣ್ಣನವರು ಗಾಂಧಿ, ಅಂಬೇಡ್ಕರ್, ಕಾರ್ಲ್‌ಮಾರ್ಕ್ಸ್ ಅವರ ವಿಚಾರಗಳನ್ನು ಆಚರಣೆಗೆ ತಂದಿದ್ದರೆಂದು ಹೇಳುವುದು ಅಸಹಜ ಮತ್ತು ವಚನ ಚಳುವಳಿಯ ವೈಭವೀಕರಣ ಎಂಬುದು ಅವರ ಅಭಿಪ್ರಾಯ. ಬಸವಣ್ಣನವರ ಕಾಲದಲ್ಲಿ ಎಲ್ಲವೂ ಆಗಿತ್ತು ಮಾತ್ರವಲ್ಲ; ಇವರು ಸಾಧಿಸಿದ್ದಕ್ಕಿಂತ ಹೆಚ್ಚೇ ಆಗಿತ್ತು ಎಂದು ನಾವು ಹೇಳಿದರೆ ಉತ್ಪ್ರೇಕ್ಷೆ ಏನಲ್ಲ.

ಯಾರನ್ನಾದರೂ ಪರಸ್ಪರ ಹೋಲಿಸುತ್ತಿದ್ದರೆ ಸಮಾನ ಅಂಶ ಯಾವುದಿದೆಯೋ ಅದನ್ನು ಹಿಡಿದು ಹೋಲಿಸಲಾಗುವುದು. ಸ್ವತಃ ಮಹಾತ್ಮ ಗಾಂಧೀಜಿ ಹೇಳಿದ್ದಾರೆ, 800 ವರ್ಷಗಳ ಹಿಂದೆ ಗುರು ಬಸವಣ್ಣನವರು ಆಚರಿಸಿ ಉಪದೇಶ ಮಾಡಿದ ಅಷ್ಟೆಲ್ಲ ತತ್ವಗಳನ್ನು ಆಚರಿಸಲು ಗಾಂಧೀಜಿಯವರಿಗೆ ಸಾಧ್ಯವಾಗಿಲ್ಲ; ಅದರಲ್ಲಿ ಕೆಲವನ್ನು ಮಾತ್ರ ಅವರು ಆಚರಿಸಿದರು.

ಮಹಾತ್ಮ ಗಾಂಧೀಜಿಯವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಇಂಥ ಸ್ವಾತಂತ್ರ್ಯದ ಅಗತ್ಯ 12ನೆಯ ಶತಮಾನದಲ್ಲಿ ಗುರು ಬಸವಣ್ಣನವರಿಗೆ ಇರಲಿಲ್ಲ; ಆಗ ಅಗತ್ಯವಾಗಿದ್ದುದು ಪುರೋಹಿತ ಶಾಹಿಯಿಂದ ಬಿಡುಗಡೆ, ಜಾತೀಯತೆ ಮತ್ತು ಅಸ್ಪೃಶ್ಯತೆಯ

ನಿವಾರಣೆ. ಹೀಗಾಗಿ ಗುರು ಬಸವಣ್ಣನವರು ಮಾನವ ಸ್ವಾತಂತ್ರ್ಯ - ದೇಶದ ಸ್ವಾತಂತ್ರ್ಯಕ್ಕೂ ಮಿಗಿಲಾದುದು, ಅದಕ್ಕಾಗಿ ಹೋರಾಡಿದ್ದಾರೆ. ಮಹಾತ್ಮಾಜಿಯವರು ಆಚರಣೆಗೆ ತಂದ ಸತ್ಯಾಗ್ರಹವು ಗಣಾಚಾರ ಎಂದು ಆಚರಣೆಯ ಬಂದು ಪಂಚ ಆಚಾರಗಳಲ್ಲಿ ಒಂದು ಆಗಿದೆ. ಮಹಾತ್ಮಾಜಿ ವೈಯಕ್ತಿಕವಾಗಿ ಜಾತೀಯತೆಯನ್ನು ಆಚರಿಸಲಿಲ್ಲವಾದರೂ ಅದರ ವಿರುದ್ಧ, ಅದರ ತಾಯಿಯಾದ ವರ್ಣಾಶ್ರಮ ವ್ಯವಸ್ಥೆಯ ವಿರುದ್ಧ ತಾತ್ವಿಕವಾಗಿ ಹೋರಾಡಲಿಲ್ಲ. ಆ ಬಗ್ಗೆ ದಿಟ್ಟ ನಿಲುವು ತಾಳಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ನಿರತರಾದ ಅವರು ಆ ಬಗ್ಗೆ ಹೆಚ್ಚು ಗಮನಕೊಡದಿರಲು ಒಂದು ಕಾರಣವನ್ನು ಊಹಿಸಬಹುದು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸವರ್ಣೀಯರು ಪ್ರಧಾನ ಪಾತ್ರ ವಹಿಸುತ್ತಿದ್ದರಿಂದ. ವರ್ಣ ಮತ್ತು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟಕ್ಕೆ ನಿಂತರ ಸವರ್ಣೀಯರು ಸಿಡಿದು ಹೋಗಿ ಚಳುವಳಿಯು ದುರ್ಬಲವಾಗಬಹುದೆಂಬ ಅಂಜಿಕೆ ಇರಲಿಕ್ಕೂ ಸಾಕು. ಮೊದಲು ಹೊರಗಿನ ಶತ್ರು ಬ್ರಿಟಿಷರನ್ನು ಅಟ್ಟಿದರೆ ನಂತರ ಒಳಗಣ ಶತ್ರುವಾದ ಜಾತೀಯತೆಯನ್ನು ಕಿತ್ತೊಗೆಯಬಹುದು ಎಂಬುದು ಅಂತರಂಗದ ಆಲೋಚನೆ ಆಗಿರಬಹುದು.

ಇನ್ನು ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿಯೂ ಅಷ್ಟೆ. ಅಸ್ಪೃಶ್ಯತೆಯನ್ನು ಆಚರಿಸಬಾರದೆಂದು ಮಹಾತ್ಮಾಜಿ ಹೇಳಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಎಲ್ಲರನ್ನೂ ಸಮಾನವಾಗಿ ಕಂಡರು; ಅಸ್ಪೃಶ್ಯರೆಂಬ ಪದ ತೊಡೆದು ಹಾಕಿ ಹರಿಜನರೆಂದು ಅವರನ್ನು ಕರೆದರು. ಹರಿಜನ ಕನ್ಯೆಯೋರ್ವಳನ್ನು ಸವರ್ಣೀಯ ವರನಿಗೆ ಕೊಟ್ಟು ವಿವಾಹ ಸಹ ಮಾಡಿಸಿದರು. ಗುರು ಬಸವಣ್ಣನವರು ಕೇವಲ ನಾಮಾಂತರ ಮಾಡಲಿಲ್ಲ, ಅಸ್ಪೃಶ್ಯರನ್ನು ಪರ್ಯಾಯ ನಾಮದಿಂದ ಹರಿಜನರೆಂದು ಕರೆಯಲಿಲ್ಲ. ಅವರಿಗೆ ಧರ್ಮ ಸಂಸ್ಕಾರವನ್ನು ಕೊಟ್ಟರು, ಧಾರ್ಮಿಕ -ಸಾಮಾಜಿಕ ಸಮಾನತೆಯನ್ನು ನೀಡಿದರು. ಈ ದೃಷ್ಟಿಯಿಂದಲೂ ಗುರು ಬಸವಣ್ಣನವರು ಗಾಂಧೀಜಿಗಿಂತ ಒಂದು ಹೆಜ್ಜೆ ಮುಂದಿದ್ದಾರೆ. ಗಾಂಧೀಜಿ ಪ್ರಾಂಜಲ ಮನಸ್ಸಿನಿಂದ ಇದನ್ನು ಒಪ್ಪಿಕೊಂಡಿದ್ದಾರೆ.

ಇನ್ನು ಡಾ|| ಬಾಬಾ ಸಾಹೇಬ ಅಂಬೇಡ್ಕರ್ ಅವರ ವಿಷಯ. ಅವರ ಸಾಧನೆ ಅಸಾಮಾನ್ಯ, ದೇಶಕ್ಕೊಂದು ಸಂವಿಧಾನ ಕೊಟ್ಟ ಮಹಾ ಮೇಧಾವಿ. ದಲಿತರಿಗೆ 15% ಮೀಸಲಾತಿ ಕೊಟ್ಟಿದ್ದಾರೆ. ಈ ವಿಷಯದಲ್ಲಿ ಗುರು ಬಸವಣ್ಣನವರು ಇನ್ನೂ ಮುಂದೆ. ಡಾ|| ಅಂಬೇಡ್ಕರ್ ಅವರು ದಲಿತರಾಗಿ ಹುಟ್ಟಿದರು. ಅಸ್ಪೃಶ್ಯತೆಯ ಶಾಪದ ತಾಪಕ್ಕೆ ಸಿಲುಕಿ ನೋವು ಅಪಮಾನಗಳನ್ನು ಅನುಭವಿಸಿದರು. ಬ್ರಿಟಿಷರ ಆಡಳಿತ, ಶಿಕ್ಷಣ ಪದ್ಧತಿಯಿಂದಾಗಿ ಉನ್ನತ ಶಿಕ್ಷಣ ಪಡೆಯಲು ಅವಕಾಶ ದೊರೆಯಿತು. ಸಂವಿಧಾನ ರಚನೆಯ ಸಮಿತಿಯ ಅಧ್ಯಕ್ಷರೂ ಆದರು; ಸಂವಿಧಾನ ಶಿಲ್ಪಿ ಎಂಬ ಕೀರ್ತಿಗೆ ಭಾಜನರಾದರು.

ಗುರು ಬಸವಣ್ಣನವರು ಶ್ರೇಷ್ಠವೆನಿಸಿಕೊಂಡಿದ್ದ ಬ್ರಾಹ್ಮಣ ಕುಲದಲ್ಲಿ ಹುಟ್ಟಿದರು. ಜಾತಿ ದೃಷ್ಟಿಯಿಂದ ಅವರಿಗೆ ಅಪಮಾನ, ನೋವು ಎರಗಲಿಲ್ಲವಾದರೂ ಶೂದ್ರ ಮತ್ತು ಅಸ್ಪೃಶ್ಯ ಜನಾಂಗದ ನೋವಿಗೆ ದನಿಯಾದರು; ಅವರ ಸಾಮಾಜಿಕ -ಧಾರ್ಮಿಕ ಆವಶ್ಯಕತೆಯನ್ನು ಅರಿತರು. ಅವರಲ್ಲಿ ತುಂಬಿದ್ದ ಕೀಳರಿಮೆಯ ಕಲ್ಮಶವನ್ನು ತೆಗೆದು ಆತ್ಮಬಲವನ್ನು ತುಂಬಲು ಬಗೆ ಬಗೆಯ ಯೋಜನೆಗಳನ್ನು ರೂಪಿಸಿದರು.

ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ
ಭಲಾರೆ ಬಸವಯ್ಯ ಬಸವರಸ। ನಿನ್ನುಸಿರು
ನೆಲೆಯಾಯ್ತು ನಿತ್ಯ ಜನಪದಕೆ

ಎಂದು ಜನಪದರು ಕೊಂಡಾಡುತ್ತಾರೆ. ವಿದ್ಯೆಯು ಎಲ್ಲರಿಗೆ ಲಭ್ಯವಾಗುವಂತೆ ಮಾಡಿದರು.

ಸಾಧು ಸಾಥೆಲೆ ಬಸವಾ ಓದು ಕಲಿಯಿತು ಜನವು
ಹೋದ ಹೋದಲ್ಲಿ ಹೊಸ ಮಾತು ಕೇಳಿದವು
ಮೇದಿನಿಗೆ ಬಂತು ಹೊಸಬೆಳಕು.

ಎಲ್ಲರಿಗೂ ಶಿಕ್ಷಣ ಲಭ್ಯವಾಯಿತು, ಹೊಸ ಬಗೆಯ ಚಿಂತನೆ ಪ್ರಾರಂಭವಾಯಿತು. ಅಸ್ಪೃಶ್ಯ ಕುಲದಲ್ಲಿ ಹುಟ್ಟಿದ ಮಾದಾರ ಚನ್ನಯ್ಯ, ಡೋಹಾರ ಕಕ್ಕಯ್ಯ ಮುಂತಾದವರನ್ನು ಸ್ಮರಿಸುತ್ತ ಅವರ ಹಿರಿಮೆಯನ್ನು, ಸಾಧನೆಯನ್ನು ಕೊಂಡಾಡುವರು. ಮೇಲ್ಜಾತಿಯಿಂದ ಬಂದವರು ಕೆಳವರ್ಗದವರನ್ನು ನಿಮ್ಮ ಗೋತ್ರ ಯಾವುದು? ಎಂದು ಮೂದಲಿಸುವ ಧ್ವನಿಯಲ್ಲಿ ಕೇಳಿದಾಗ, ಇವರು ಮುಜುಗರದಿಂದ ನಾಚಿದಾಗ ನೀವೇತಕ್ಕೆ ಸಂಕೋಚ ಪಡುವಿರಿ, ಆತ್ಮವಿಶ್ವಾಸದಿಂದ ಹೇಳಿರಿ ಮಾದಾರ ಚನ್ನಯ್ಯನವರ ಕುಲದವರು, ನಾವು ಡೋಹಾರ ಕಕ್ಕಯ್ಯನವರ ಕುಲದವರು ಎಂಬುದಾಗಿ. ಅಂಥ ಸಾಧನೆ ಮತ್ತಾರು ಮಾಡಿದ್ದಾರೆ? ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿ ಅವರ ಬಗ್ಗೆ ಕಳಕಳಿ ವ್ಯಕ್ತಪಡಿಸಿದ ಡಾ|| ಅಂಬೇಡ್ಕರ್ ಅವರಿಗಿಂತಲೂ ಬ್ರಾಹ್ಮಣರಾಗಿ ಹುಟ್ಟಿ ಶೋಷಿತರ ಬಗ್ಗೆ ಅನುಕಂಪ ತಾಳಿ ಸಂಪ್ರದಾಯ ಬದ್ಧ ಸಮಾಜವನ್ನು ಎದುರಿಸಿ, ಅವರ ವಿಮೋಚನೆಗೆ ಪ್ರಯತ್ನಿಸಿದ ಗುರು ಬಸವಣ್ಣನವರು ಶ್ರೇಷ್ಠರಲ್ಲವೆ? ಡಾ|| ಅಂಬೇಡ್ಕರರವರಿಗೆ ಮೊದಲು ಬ್ರಿಟಿಷ್ ಆಡಳಿತದ ಬೆಂಬಲ, ನಂತರ ಪ್ರಜಾಪ್ರಭುತ್ವದ ಬೆಂಬಲ ಇದ್ದಿತು. ಗುರು ಬಸವಣ್ಣನವರಿಗೆ ಅಂಥ ಅವಕಾಶವಿರಲಿಲ್ಲ. ರಾಜನನ್ನು, ಪುರೋಹಿತ ಶಾಹಿಯನ್ನು, ಶಾಸ್ತ್ರ ದಾಸ್ಯಕ್ಕೊಳಗಾದ ಸವರ್ಣೀಯ ಸಮಾಜವನ್ನು ಎದುರು ಹಾಕಿಕೊಂಡು ಅವರು ಕೆಲಸ ಮಾಡಬೇಕಿತ್ತು. ಇದನ್ನು ಬರಗೂರು ರಾಮಚಂದ್ರಪ್ಪ ಮರೆತರೆ ವಚನ ಚಳುವಳಿಗೆ ಬಹುದೊಡ್ಡ ಅನ್ಯಾಯವನ್ನು ಮಾಡಿದಂತಾಗುತ್ತದೆ.

ಕಾರ್ಲ್‌ಮಾರ್ಕ್ಸ ಅವರಿಗೆ ಗುರು ಬಸವಣ್ಣನವರನ್ನು ಹೋಲಿಸುವಾಗ ಸೈದ್ಧಾಂತಿಕವಾದ ವ್ಯತ್ಯಾಸಗಳನ್ನು ಗುರುತಿಸುವುದು ಅವಶ್ಯವಾಗುತ್ತದೆ. ಈ ಮೂವರು ಮಹಾನುಭಾವರು ಒಂದೊಂದು ಅಂಶಕ್ಕೆ ಒತ್ತುಕೊಟ್ಟರೆ ಗುರು ಬಸವಣ್ಣನವರು ಪರಿಪೂರ್ಣ ವ್ಯಕ್ತಿ ಪರಿಪೂರ್ಣ ಸಮಾಜಗಳ ರಚನೆಗೆ ಬೇಕಾದ ಎಲ್ಲ ಅಂಶಗಳನ್ನು ತಮ್ಮ ಸಾಧನೆಯಲ್ಲಿ ಬಳಸಿಕೊಂಡರು. ಕಾರ್ಲ್‌ಮಾರ್ಕ್ಸ್‌ರದು ಸುಖಿ ರಾಜ್ಯದ ಪರಿಕಲ್ಪನೆ ಹೊಂದಿದ್ದರೆ ಬಸವಣ್ಣನವರು ಕಲ್ಯಾಣ ರಾಜ್ಯದ ಪರಿಕಲ್ಪನೆ ಹೊಂದಿದ್ದಾರೆ. ಸಾಂಪ್ರದಾಯಿಕ ಶೈಲಿಯಲ್ಲಿ ಬರೆಯಲ್ಪಟ್ಟ ಬಸವ ಪುರಾಣಗಳು, ಹರಿಹರನ ಬಸವರಾಜ ದೇವರ ರಗಳೆ ಸಮೃದ್ಧ ಮಹಾಮನೆಯ ವರ್ಣನೆ ಮಾಡಿದರೂ ಅದು ಖಾಸಗಿತನ ಹೊಂದಿದೆ. ಅದೇ ಮಣ್ಣಿನ ಮಕ್ಕಳಾದ ಜಾನಪದ ಕವಿಗಳ ಮಾತಿನಲ್ಲಿ ಗುರು ಬಸವಣ್ಣನವರು ಕಟ್ಟಿದ ಸಮೃದ್ಧ ಮತ್ತು ಸಂತೃಪ್ತ ಸಮಾಜದ ವರ್ಣನೆ ಬರುತ್ತದೆ.

ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು
ಬಸವ ಮಳೆಬೆಳೆಯು ನಾಡೊಳಗೆ ನಿಜ ದೀಪ
ಬಸವನೆ ಸಗ್ಗ ಸೋಪಾನ||

ಕಾಯಕವ ಕಲಿಸುದಕೆ ನಾಯಕನು ಬಸವಯ್ಯ
ಜೀಯ ಹೊಸ ಮತಕೆ ಶಿವಭಕ್ತಿ ಸಾರುದಕೆ
ರಾಯ ಜೀವನದ ಹೊಸನುಡಿಗೆ ||

ಉಂಡು ತೇಗಿತು ಲೋಕ ಕೊಂಡಾಡಿ ಕಾಯಕವ
ಕಂಡ ಕಂಡಲ್ಲಿ ದಾಸೋಹ । ಕಾಯಕದ
ಕಂಡ ಜೀವನದ ಶಿವಮಾತು ||

ಕಾರ್ಲ್‌ಮಾರ್ಕ್ಸ್ ಕೇವಲ ತತ್ವಜ್ಞಾನಿ. ಭೌತಿಕವಾದದ ತಳಹದಿಯ ಮೇಲೆ ಸಾಮ್ಯವಾದಿ ಸಿದ್ಧಾಂತ ನೀಡಿದ ಮೇಧಾವಿ. ಆದರೆ ತನ್ನ ಜೀವನದಲ್ಲಿ ತಾನು ಆ ಸಿದ್ಧಾಂತವನ್ನು ಪ್ರಯೋಗಕ್ಕೆ ತರಲಿಲ್ಲ. ಅದನ್ನು ಅನುಷ್ಠಾನಕ್ಕೆ ತಂದವರು ಲೆನಿನ್ ಮತ್ತು ಸ್ಟಾಲಿನ್. ಆದರೆ ಗುರು ಬಸವಣ್ಣನವರು ಕೇವಲ ಸಿದ್ಧಾಂತವನ್ನಷ್ಟೆ ಕೊಡದೆ ಸ್ವತಃ ಪ್ರಯೋಗಕ್ಕೆ ತಂದರು. ಅದರ ವಿವರಣೆ ಜನಪದ ಸಾಹಿತ್ಯದಲ್ಲಿ ಬರುತ್ತದೆ. ಆಧುನಿಕ ಭಾಷೆಯಲ್ಲಿ ಬಸವ ಸಿದ್ಧಾಂತವನ್ನು ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ ಮುಂತಾದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಅಗತ್ಯವಾಗಿದೆ. ಕಾರ್ಲ್‌ಮಾರ್ಕ್ಸ್‌ನ Theory of production ಮತ್ತು Theory of distribution ಅರ್ಥ ಶಾಸ್ತ್ರದ ಪ್ರಮುಖ ಸಿದ್ಧಾಂತಗಳಾದಂತೆ ಬಸವಣ್ಣನವರ ಕಾಯಕ ಮತ್ತು ದಾಸೋಹ ಸಿದ್ಧಾಂತ. ದಾಸೋಹ ಎಂದರೆ ಕೇವಲ ಊಟಕ್ಕೆ ಸೀಮಿತವಾದುದಲ್ಲ. ಅದು ಒಂದು ಪರಿಕಲ್ಪನೆ. ಮಾರ್ಕ್ಸ್‌ನ ಪ್ರಕಾರ ಆಸ್ತಿಯ ಒಡೆತನ State ಅಥವಾ ರಾಜ್ಯದ್ದು, ಬಸವಣ್ಣನವರ ಪ್ರಕಾರ ದೇವರದು, ಖಾಸಗಿ ಒಡೆತನಕ್ಕೆ ಉಭಯತರಲ್ಲೂ ಅವಕಾಶವಿಲ್ಲ. ಹೊನ್ನಿನೊಳಗೊಂದೊರೆಯು, ವಸ್ತ್ರದೊಳಗೊಂದೆಳೆಯು, ಅನ್ನದೊಳಗೊಂದಗುಳ ಇಂದಿಂಗೆ, ನಾಳಿಂಗೆ ಬೇಕೆಂದೆನಾದೊಡೆ ನಿಮ್ಮ (ದೇವರ) ಆಣೆ, ನಿಮ್ಮ ಪ್ರಮಥ (ಶರಣ)ರ ಆಣೆ, ನಿಮ್ಮ ಪ್ರಮಥರಾಣೆ ಎಂಬಲ್ಲಿ, ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಕಳವು ಮಾಡುವವ ಕಳ್ಳನಲ್ಲ ಕಳ್ಳವು ಮಾಡಿಸಿಕೊಳ್ಳುವಂತೆ ಬೈಚಿಟ್ಟುಕೊಳ್ಳುವವ ಕಳ್ಳ ಎಂಬ ಬಸವ ಸಿದ್ಧಾಂತದಲ್ಲಿ ಮಾರ್ಕ್ಸನ ಸಾಮ್ಯವಾದದ ಹೋಲಿಕೆ ಇದೆ. ಮಾರ್ಕ್ಸ್‌ನದು ಭೌತಿಕವಾದದ (Materialism) ಮೇಲೆ ನಿಂತ ಸಾಮ್ಯವಾದ. ಗುರು ಬಸವಣ್ಣನವರದು ಚಿತ್ಪ್ರಧಾನವಾದ (Idealism) ಕೇವಲ ಧಾರ್ಮಿಕ ಸಮಾನತೆಯ ದೃಷ್ಟಿಯಿಂದ ಮಾತ್ರವಲ್ಲ ಸಾಮಾಜಿಕ ಸಮಾನತೆ, ಆರ್ಥಿಕ ಸಮಾನತೆಯ ದೃಷ್ಟಿಯಿಂದಲೂ ಮಹತ್ತರ ಕಾರ್ಯ ಮಾಡಿದ್ದಾರೆ. ಹೀಗಾಗಿ ಎಲ್ಲ ಕುಲದವರು, ಎಲ್ಲ ಕಾಯಕದವರೂ ಆರ್ಥಿಕ ಸಮೃದ್ಧಿ, ಮಾನಸಿಕ ಸಂತೃಪ್ತಿ ಸಾಧಿಸುವಲ್ಲಿ ಯಶಸ್ವಿಯಾದರು.

ಬರಗೂರರವರು ವಚನ ಚಳುವಳಿಯು 'ಶಿವ' ಕೇಂದ್ರಿತವಾಗಿತ್ತು ಎನ್ನುತ್ತಾರೆ. ಶಿವ ಬೇರೆ, ಲಿಂಗದೇವ ಬೇರೆ, 'ಶಿವ' ತ್ರಿಮೂರ್ತಿಗಳಲ್ಲಿ ಒಬ್ಬನಾದ ದೇವತೆ. ಲಿಂಗದೇವನು ಸೃಷ್ಟಿಕರ್ತ. ಶಿವ ಶೈವರ ದೇವತೆ. ಲಿಂಗದೇವನು ಎಲ್ಲ ಆತ್ಮರ ಪಿತನು. ಉಪಾಸನಾ ವಸ್ತುಗಳಾಗಿದ್ದ ಪೌರಾಣಿಕ ದೇವತೆ, ಪಂಚಭೂತಗಳು, ಪ್ರಾಣಿಗಳು, ಪಿತೃಗಳು ಮುಂತಾದುವನ್ನು ತಿರಸ್ಕರಿಸಿ ಸೃಷ್ಟಿಕರ್ತನನ್ನು ಮಾತ್ರ ಆರಾಧಿಸುವ ಏಕದೇವೋಪಾಸನೆಯನ್ನು ಬಸವಣ್ಣನವರು ಬಳಕೆಗೆ ತಂದರು. ಈ ಇಷ್ಟಲಿಂಗವು ದೇವರ ಕುರುಹಾಗಿ ದೇವನ ಪಿತೃತ್ವ (Fatherhood of God) ವನ್ನು ಮಾನವರ ಭ್ರಾತೃತ್ವ (Brotherhood of Humanity)ವನ್ನು ಸಾರುತ್ತದೆ. ಹೇಗೆ ರಾಷ್ಟ್ರ ಧ್ವಜವು ಜಾತಿ ಮತದ ಕುರುಹಲ್ಲವೋ ಹಾಗೆ ಇಷ್ಟಲಿಂಗವು ಒಂದು ಜಾತಿ, ಒಂದು ಮತದ ಕುರುಹಾಗದೆ ಗಣ ತಂತ್ರ ವ್ಯವಸ್ಥೆಯ ಕುರುಹು. ಗುರು ಬಸವಣ್ಣನವರು ಕೊಟ್ಟುದು ಬಣ ಧರ್ಮವಲ್ಲ, ಗಣಧರ್ಮ.

ಗುರು ಬಸವಣ್ಣನವರು ದೀಕ್ಷೆಯನ್ನು ಪಡೆದವರನ್ನು ಭಕ್ತರೆಂದು ಆದರಿಸಿ, ಮಿಕ್ಕವರನ್ನು ಭವಿಗಳೆಂದು ತಿರಸ್ಕರಿಸುತ್ತಿದ್ದರು ಎಂಬುದು ಬರಗೂರರ ಮತ್ತೊಂದು ಆರೋಪ. ಬಸವಣ್ಣನವರು ಪರಿಪೂರ್ಣ ಸಮಾಜ ರಚನೆಯ ಧ್ಯೇಯ ಸಾಧಿಸಲು ಬಳಸಿದ ಸಾಧನ

ಧರ್ಮ. ದೇವರಲ್ಲಿ ಅಖಂಡ ವಿಶ್ವಾಸ. ನಾಸ್ತಿಕವಾದವನ್ನು ಮೈಗೂಡಿಸಿಕೊಂಡ ಬರಗೂರರಿಗೆ ಇಂದು ಧರ್ಮದ ಅಗತ್ಯ ಕಾಣಲಿಕ್ಕಿಲ್ಲವಾದರೂ ಅಂದು 12ನೆಯ ಶತಮಾನದಲ್ಲಿ ಧಾರ್ಮಿಕ ಸ್ವಾತಂತ್ರ್ಯ, ಹಕ್ಕು ಒದಗಿಸುವುದು ಅತಿ ಮಹತ್ವದ ಸಾಧನವಾಗಿತ್ತು. ಜಾತೀಯತೆ, ಅಸ್ಪೃಶ್ಯತೆ ನಿವಾರಿಸಲು ಗುರು ಬಸವಣ್ಣನವರು ಬಳಸಿದ ಸಾಧನಗಳೆಂದರೆ 1. ಧರ್ಮದೀಕ್ಷೆ 2.ಸಹಪಂಕ್ತಿ ಭೋಜನ 3. ಶರಣರ ಒಡನಾಟ 4. ದೀಕ್ಷಿತರಲ್ಲಿ ಪರಸ್ಪರ ವೈವಾಹಿಕ ಸಂಬಂಧ. ಈ ನಾಲ್ಕನ್ನೂ ಅವರು ಆಚರಣೆಗೆ ತಂದರು. ಡಾ|| ಅಂಬೇಡ್ಕರರಿಗೆ ವಿದ್ಯೆ, ಸಾಮಾಜಿಕ ಸ್ಥಾನಮಾನ, ಉನ್ನತ ಹುದ್ದೆ ಎಲ್ಲ ಇದ್ದರೂ ಧಾರ್ಮಿಕ ಹಕ್ಕು ದೊರೆಯದೆ ಜೀವನ ಪೂರ್ಣವಾಗದು ಎಂದು ಭಾವಿಸಿ ಬೌದ್ಧಧರ್ಮವನ್ನು ಸ್ವೀಕರಿಸಿದರು. ಮಾರ್ಕ್ಸನ ಸಿದ್ಧಾಂತ ಹೊಟ್ಟೆ, ಬಟ್ಟೆ, ಸೂರು, ಲೌಕಿಕ ಶಿಕ್ಷಣ, ಔಷಧಿ ಕುರಿತು ಮಾತ್ರ ಚಿಂತಿಸುತ್ತದೆ. ಹೀಗಾಗಿ ಅದು ಅಪರಿಪೂರ್ಣ ಸಿದ್ಧಾಂತವಾಗಿ ದಿನದಿನಕ್ಕೆ ತನ್ನ ಪ್ರಭಾವ ಕಳೆದುಕೊಳ್ಳುತ್ತಿದೆ. ಕಮ್ಯುನಿಸಮ್ಮಿನ ಕ್ರೂರ ಭಯದ ಮಧ್ಯದಲ್ಲೂ ಆ ದೇಶಗಳಲ್ಲಿ ಜನರು ತಾವು ನಂಬಿದ ಧರ್ಮಗಳನ್ನು ಆಚರಿಸುತ್ತಾರೆ, ಗುಟ್ಟಾಗಿ ಪ್ರಾರ್ಥಿಸುತ್ತಾರೆ.

ಈ ಎಲ್ಲ ದೃಷ್ಟಿಯಿಂದ ನೋಡಿದಾಗ ಮಹಾತ್ಮಗಾಂಧಿ, ಡಾ|| ಅಂಬೇಡ್ಕರ ಮತ್ತು ಕಾರ್ಲ್‌ಮಾರ್ಕ್ಸರ ಸಾಧನೆ ಏಕ ಮುಖವಾದುದು, ಗುರು ಬಸವಣ್ಣನವರದು ಬಹುಮುಖಿ ಮತ್ತು ಸರ್ವತೋಮುಖಿ. ಅದನ್ನು ತಿಳಿದುಕೊಳ್ಳಲು ಪ್ರಾಮಾಣಿಕ ಮನಸ್ಸು ಬೇಕು. ಅಂಥ ಪ್ರಾಮಾಣಿಕತೆ ಬರಗೂರು ರಾಮಚಂದ್ರಪ್ಪನವರಲ್ಲಿ ಬರಲಿ ಎಂದು ಹಾರೈಸೋಣ.

ಮೈಸೂರು ನಗರದಲ್ಲಿ ದಿ.8ರಂದು 815ನೆಯ ಬಸವ ಪಂಚಮಿ ಕಾರ್ಯಕ್ರಮ

ಮೈಸೂರು ನಗರದ ರಂಗಾಚಾರ್ಲು ಪುರಭವನದಲ್ಲಿ (ಟೌನ್‌ಹಾಲ್)ದಲ್ಲಿ ರಾಷ್ಟ್ರೀಯ ಬಸವ ದಳ, ಮೈಸೂರು ವತಿಯಿಂದ ಬಸವ ಪಂಚಮಿಯನ್ನು ದೇವ(ಭಾನು)ವಾರ, ದಿ.8-7-2010ರಂದು ಬೆಳಿಗ್ಗೆ 10-30ರಿಂದ ಏರ್ಪಡಿಸಲಾಗಿದೆ. ಬಸವ ಧರ್ಮ ಪೀಠಾಧ್ಯಕ್ಷೆ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**ಯವರ ದಿವ್ಯ ಸನ್ನಿಧಿಯಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಬೇಕೆಂದು ಕೋರುತ್ತೇವೆ. ಕಾರ್ಯಕ್ರಮದ ನಂತರ ಪ್ರಸಾದ ದಾಸೋಹವಿದೆ.

ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲರಿಗೂ ಆದರದ ಸ್ವಾಗತ.

ಶರಣ.ಕೆ.ಎಂ.ಶಿವಶಂಕರ್
ಗೌರವಾಧ್ಯಕ್ಷರು, ರಾಷ್ಟ್ರೀಯ ಬಸವ ದಳ

ಶರಣೆ. ಸರೋಜಮ್ಮ ನಾಗರಾಜು
ಪ್ರಧಾನ ಕಾರ್ಯದರ್ಶಿ

ಬಸವ ವಚನಾಮೃತ ಭಾಗ -4 ಬಸವ ಪಂಚಮಿಯಂದು ಬಿಡುಗಡೆ

ಕಲ್ಯಾಣ ಕಿರಣದಲ್ಲಿ ಧಾರವಾಹಿಯಾಗಿ ಬಸವ ವಚನಾಮೃತ ಎಂಬ ಶೀರ್ಷಿಕೆಯ ಅಡಿಯಲ್ಲಿ ಗುರು ಬಸವಣ್ಣನವರ ವಚನಗಳಿಗೆ ವ್ಯಾಖ್ಯಾನ ಬರೆಯಲಾಗುತಿದೆಯಷ್ಟೆ. ಈಗಾಗಲೇ 1-108,109 -216, 217 -324 ಹೀಗೆ 108 ವಚನಗಳಿಗೆ ಭಾಗ 1,2,3ಯಂದು ಪ್ರಕಾಶನಗೊಂಡಿವೆ. ದಿ.14-8-2010ರ ಬಸವ ಪಂಚಮಿಯಂದು ನಡೆಯಲಿರುವ ವಿಶೇಷ ಕಾರ್ಯಕ್ರಮದಲ್ಲಿ 325 -432ರವರೆಗಿನ ವಚನಗಳ ಬಸವ ವಚನಾಮೃತದ ಭಾಗ 4 ಬಿಡುಗಡೆಯಾಗಲಿದೆ. ಆಸಕ್ತರು ಕೊಳ್ಳಲು ಅವಕಾಶ ಉಂಟು.

ಭಾಗ -25 - ಮಾತಾಜಿ

ಬಸವ ವಚನಾಮೃತ

415. ಆಢ್ಯತೆಯ ವ್ಯಕ್ತಿ ನಾನಲ್ಲ

ಅಡ್ಡ ದೊಡ್ಡ ನಾನಲ್ಲಯ್ಯಾ; ದೊಡ್ಡ ಬಸುರು ಎನಗಿಲ್ಲಯ್ಯಾ
ದೊಡ್ಡವರನಲ್ಲದೆ ನಿಮ್ಮ ಶರಣರು ಮನ್ನಿಸರಯ್ಯಾ
ಹಡೆದುಂಬ ಸೂಳೆಯಂತೆ ಧನವುಳ್ಳವರನರಸಿಯರಸಿ
ಬೋಧಿಸಲು ಪ್ರಾರ್ಥಿಸಲು ಮುನ್ನ ನಾನರಿಯೆನಯ್ಯಾ,
ದೊಡ್ಡತನವೆನಗಿಲ್ಲ; ಅಂಜುವೆನಂಜುವೆ ನಿಮ್ಮ ಪ್ರಥಮರಿಗೆ
ಲಿಂಗದೇವಾ. - ಬ.ವ.ದೀ.413

ವ್ಯಂಗ್ಯವಾದ ಶೈಲಿಯಲ್ಲಿ ಗುರು ಬಸವಣ್ಣನವರು ಧನ ಮದದಿಂದ ಬೀಗಿರುವ ಸಿರಿವಂತರನ್ನು ಇಲ್ಲಿ ಟೀಕಿಸಿದ್ದಾರೆ. ಅಡ್ಡಡ್ಡಲಾಗಿ ಬೆಳೆದಿರುವ ದೊಡ್ಡ ಮನುಷ್ಯ ತಾನಲ್ಲ; ಶ್ರೀಮಂತಿಕೆಯ (ಮತ್ತು ಆಲಸ್ಯದ) ಸಂಕೇತವಾದ ಮುಂದೆ ಬಂದ ಹೊಟ್ಟೆ ತಮಗಿಲ್ಲ. ಆದರೆ ನಿಜವಾದ ಶರಣರು ಗೌರವಿಸುವುದು ಉನ್ನತ ವ್ಯಕ್ತಿತ್ವವಿದ್ದವರನ್ನು ಮಾತ್ರ. ಪತಿವ್ರತೆಯು ಬಡತನವೆ ಇರಲಿ, ಸಿರಿತನವೇ ಇರಲಿ ತನ್ನ ಪತಿಯಲ್ಲಿ ಮಾತ್ರ ನಿಷ್ಠೆ-ಪ್ರೇಮ ಹೊಂದಿರುವಳು. ಆದರೆ ವೇಶ್ಯೆಯು ಶ್ರೀಮಂತರನ್ನು ಆಯ್ಕೆ ಮಾಡಿಕೊಂಡು ಅವರನ್ನು ಹೊಗಳಿ ಹೊಗಳಿ ಸಂಪತ್ತನ್ನು ದೋಚುವಳು. ಆ ರೀತಿ ಹಣ ಉಳ್ಳವರನ್ನೇ ಆರಿಸಿಕೊಂಡು, ಅವರನ್ನು ಹೊಗಳಿ, ಅವರಿಗೆ ಮಾತ್ರ ಬೋಧೆ ಮಾಡುವುದು, ಅವರನ್ನು ಬೇಡಿಕೊಳ್ಳುವುದು ನನಗೆ ಬರುವುದಿಲ್ಲ. ಅಂಥ ದೊಡ್ಡತನವೆನಗಿಲ್ಲ. ನಾನು ಭಯ ಪಡುವುದು ಶರಣರಿಗೆ ಮಾತ್ರ. ಲೋಕದ ನಡತೆಯ ದೃಷ್ಟಿಯಿಂದ ನಾನು ಒಂಟಿ, ಅನಾಥ! ಶರಣರ ದೃಷ್ಟಿಯಿಂದ ವಿಶಾಲವಾದ ಕುಟುಂಬವನ್ನು ಹೊಂದಿದವನು.

ಸತ್ಯವಾದಿಗಳನ್ನು, ದಿಟ್ಟವಿಚಾರದವರನ್ನು ಸಾಮಾನ್ಯವಾಗಿ ಜನರು ಅದರಲ್ಲಿಯೂ ಸಮಾಜದಲ್ಲಿ ಗಣ್ಯರೆನಿಸಿಕೊಂಡವರು, ಶ್ರೀಮಂತರು ಬೇಗನೆ ಅರ್ಥಮಾಡಿಕೊಳ್ಳುವುದಿಲ್ಲ. ಅವರೊಡನೆ ಸಹಕರಿಸುವುದಿಲ್ಲ. ಸಹಾಯ ಮಾಡುವುದಿಲ್ಲ. ಇದಕ್ಕೆ ಕಾರಣ ಸತ್ಯವಾದಿಗಳು ಧೃತಿಗೆಟ್ಟು ಬೇಡಬೇಕು, ಮತಿಗೆಟ್ಟು ಗಣ್ಯರನ್ನು ಹೊಗಳಬೇಕು. ದೀನರಾಗಿ ಅವರ ಮನೆಯ ಬಾಗಿಲನ್ನು ಕಾಯಬೇಕು ಎಂಬುದು. ಸತ್ಯವಾದಿಗಳು ಹಾಗೆ ಮಾಡುವುದಿಲ್ಲ. ಅದಕ್ಕಾಗಿ ಸಾಂಪ್ರದಾಯಿಕ ಸಮಾಜವು ಸತ್ಯವಾದಿಗಳನ್ನು ಒಂಟಿಯಾಗಿ ಮಾಡುತ್ತದೆ. ಸತ್ಯವಾದಿಯು ಎದೆಗೆಡುವುದಿಲ್ಲ. ತಾನು ಒಂಟಿ ಎಂದು ಹತಾಶನಾಗುವುದಿಲ್ಲ. ಸತ್ಯವನ್ನು, ಎಲ್ಲ ಕ್ರಾಂತಿಗಳನ್ನು ಬೆಂಬಲಿಸುವವರು ಶ್ರೀ ಸಾಮಾನ್ಯರೇ ಆಗಿರುತ್ತಾರೆ.

416. ಆಡಂಬರಕ್ಕೆ ಅಜ್ಞಾನಿಗಳು ಮಾರು ಹೋಗುವರು.

ಕುದುರೆಸತ್ತಿಗೆಯವರ ಕಂಡಡೆ ಹೊರಳಿ ಬಿದ್ದು ಕಾಲ ಹಿಡಿವರು.
ಬಡಭಕ್ತರು ಬಂದಡೆ ಎಡೆಯಿಲ್ಲ ಅತ್ತ ಸನ್ನಿಯೆಂಬರು
ಎನ್ನೊಡೆಯ ಲಿಂಗದೇವಯ್ಯನವರ
ತಡೆಗೆಡಹಿ ಮೂಗು ಕೊಯ್ಯದೆ ಮಾಣ್ಬನೆ? - ಬ.ವ.ದೀ.414

ಭವ್ಯವಾದ ಕುದುರೆಯನ್ನೇರಿ, ಸತ್ತಿಗೆ ಅಂದರೆ ಛತ್ರಿ ಹಿಡಿಸಿಕೊಂಡು ಬರುವ ಶ್ರೀಮಂತರನ್ನು ಕಂಡರೆ ಅವರಿಗೆ ಸಾಷ್ಟಾಂಗ ಹಾಕಿ ಕಾಲು ಹಿಡಿಯುತ್ತಾರೆ, ಮನೆಯಲ್ಲಿ ವೈಭವಯುತವಾದ ಉಪಚಾರ ಮಾಡುತ್ತಾರೆ. ಲಿಂಗಧಾರಿಗಳಾದ ಬಡ ಭಕ್ತರು ಬಂದರೆ "ನಮ್ಮಲ್ಲಿ ಜಾಗವಿಲ್ಲ, ಬೇರೆ ಕಡೆ ಹೋಗಿರಿ"

ಎನ್ನುವರು. ಇಂಥವರನ್ನು ಲಿಂಗದೇವನು ಕೆಳಗೆ ಕೆಡಹಿ ಮೂಗು ಕೊಯ್ಯದೆ ಬಿಡುವನೆ?

ಆಡಂಬರದ ವೇಷತೊಟ್ಟು, ಕಿರೀಟವನ್ನಿಟ್ಟು, ಆಭರಣ ಹಾಕಿಕೊಂಡು ಕುದುರೆ ಪಲ್ಲಕ್ಕಿಯನ್ನು ಏರಿ ಬರುವ ಗುರುಗಳಿಗೆ ವೈಭವದ ಸ್ವಾಗತ. ಸಮಾಜದ ಹಿತಚಿಂತಕರಾಗಿ ಧರ್ಮಬೋಧೆ, ನೀತಿ ಬೋಧೆ ಮಾಡಿ ಸಂಸ್ಕಾರ ನೀಡುವ ಧರ್ಮ ಪ್ರಚಾರಕ ಜಂಗಮರನ್ನು ಕಂಡು ಉದಾಸೀನ. ಇಂಥ ಪ್ರವೃತ್ತಿ ಹೊಂದಿರುವುದು ಸರಿಯಲ್ಲ. ಆಡಂಬರಕ್ಕೆ ಅಜ್ಞಾನಿಗಳು ಮಾರು ಹೋಗುವರಲ್ಲದೆ ನಿಜ ಜ್ಞಾನಿಗಳು ಮಾರುಹೋಗರು.ಇಲ್ಲಿ ಕುದುರೆ, ಸತ್ತಿಗೆಯವರು ಎಂಬ ಉಕ್ತಿಯು ಸ್ವಾಮಿಗಳಿಗೆ ಅನ್ವಯವಾಗುತ್ತದೆ, ಭಕ್ತರಿಗೂ ಅನ್ವಯವಾಗುತ್ತದೆ. ಶ್ರೀಮಂತ ಸ್ವಾಮಿಗಳು ಬಂದರೆ ಸಾಷ್ಟಾಂಗ ನಮಸ್ಕಾರ ಹಾಕಿ ಕಾಲಿಗೆ ನಮಸ್ಕಾರ ಮಾಡುವರು. ಬಡ ಮಠದ ಸ್ವಾಮಿಗಳು ಬಂದರೆ, ಅವರುಗಳಿಗೆ ಹೆಚ್ಚಿನ ಮಾನ್ಯತೆ ಕೊಡರು. ಅದೇ ರೀತಿ ಸಿರಿವಂತರು ಲಿಂಗಧಾರಿಗಳಾಗಿ ಬಂದರೆ ಅವರಿಗೆ ಹೆಚ್ಚಿನ ಮಾನ್ಯತೆ, ಬಡ ಭಕ್ತರು ನಿಷ್ಠಾವಂತರಿದ್ದರೂ ಅವರಿಗೆ "ನಮ್ಮಲ್ಲಿ ಇರಲು ಸ್ಥಳವಿಲ್ಲ, ಬೇರೆ ಕಡೆಗೆ ಹೋಗಿರಿ." ಎನ್ನುವರು. ಹೀಗೆ ಭಕ್ತರಲ್ಲಿ ಬಡವ, ಶ್ರೀಮಂತ ಎಂದು ಅಂತಸ್ತು ಭೇದವನ್ನು ಮಾಡುವವರನ್ನು ಲಿಂಗದೇವನು ಶಿಕ್ಷಿಸದೆ ಬಿಡನು,

ದೀಕ್ಷೆಯನ್ನು ಪಡೆದವರು ಭವಿಗಳೊಡನೆ ಬೆರೆಸುತ್ತಿರಲಿಲ್ಲ. ಅವರ ಮನೆಗಳಲ್ಲಿ ಉಳಿಯುತ್ತಿರಲ್ಲಿಲ್ಲ. ಪರ ಊರಿಗೆ ಹೋದಾಗ ಇವರಂತೆಯೇ ದೀಕ್ಷೆ ಪಡೆದ ಶರಣರ ಮನೆಯಲ್ಲಿ ಉಳಿಯುತ್ತಿದ್ದರು. ಅಂಥ ಸನ್ನಿವೇಶದಲ್ಲಿ ಮನೆಯವರು ಶ್ರೀಮಂತರು, ಬಡವರು ಎಂದು ಭೇದ ಮಾಡುವ ಸಾಧ್ಯತೆ ಕಂಡು ಧರ್ಮಪಿತರು ನೊಂದು ಈ ವಚನವನ್ನು ಹೇಳಿರಬಹುದು.

417. ಜಂಗಮರಲ್ಲಿ ಭೇದ ಸಲ್ಲದು.

ದೂರದಿಂದ ಬಂದ ಜಂಗಮುವನಯ್ಯಗಳೆಂದು
ಸಾರಿದ್ದ ಜಂಗಮವ ಪರಿಚಾರಕರೆಂಬ ಕೇಡಿಂಗೆ ಬೆರಗಾದೆನಯ್ಯಾ.
ಸಾರಿದವರು ದೂರದವರೆಂದು ಬೇರೆ ಮಾಡಿ ಕಂಡಡೆ
ಲಿಂಗದೇವ ಸಿಂಗಾರದ ಮೂಗ ಕೊಯ್ಯದೆ ಮಾಣ್ಬನೆ? - ಬ.ವ.ದೀ.415

ಮನೆಗೆ ಅತಿಥಿಗಳಾಗಿ ದೂರದಿಂದ, ಪರವೂರಿನಿಂದ ಬಂದವರನ್ನು ವಿಶೇಷವಾಗಿ ಗೌರವಿಸುತ್ತ ಹತ್ತಿರದಲ್ಲಿದ್ದ ಜಂಗಮರನ್ನು ಸೇವಕರೆಂಬಂತೆ ನಡೆಸಿಕೊಳ್ಳುವುದನ್ನು ಕಂಡು ಗುರು ಬಸವಣ್ಣನವರು ಆಶ್ಚರ್ಯ ಪಡುತ್ತಾರೆ. ಹತ್ತಿರದವರು ಹೊರಗಿನಿಂದ ಬಂದವರು ಎಂಬ ಭೇದ ಮಾಡುವವರನ್ನು ಕಂಡರೆ ಲಿಂಗದೇವನು ಸಿಂಗಾರದ ಲಕ್ಷಣವಾದ ಮೂಗನ್ನು ಕೊಯ್ಯದೆ ಬಿಡುವನೆ? ಎನ್ನುತ್ತಾರೆ.

ಈ ವಚನವು ನಂತರದಲ್ಲಿ ಸೇರಿಸಲ್ಪಟ್ಟಿರಬಹುದಾದ ವಚನವೇನೋ ಎಂಬ ಸಂಶಯ ನನ್ನನ್ನು ಕಾಡುತ್ತದೆ. ಏಕೆಂದರೆ, ಜಂಗಮರನ್ನು ಪರಿಚಾರಕರು ಎಂಬಂತೆ ಕಾಣುವುದು ಜಂಗಮವು ಜಾತಿಯಾಗಿ ವಿಕೃತಗೊಂಡಾಗ. ಹೇಗೆಂದರೆ ಉತ್ತರ ಕರ್ನಾಟಕದಲ್ಲಿ 1966ರಿಂದ ನಾವು ಪ್ರವಚನ ಮಾಡುತ್ತ ಸಂಚರಿಸುವಾಗ ಕೆಲವು ಶ್ರೀಮಂತರುಗಳ (ಬಣಜಿಗರು, ಪಂಚಮಸಾಲಿಯವರು) ಮನೆಗಳಲ್ಲಿ ಭಾವಿಯಿಂದ ನೀರು ತರಲು, ಪೂಜೆಗೆ ಪತ್ರೆ-ಪುಷ್ಪ ತರಲು ಜಂಗಮರನ್ನು ಇರಿಸಿಕೊಂಡಿದ್ದರು. ಮಾತನಾಡುವಾಗ ಪರಿಚಾರಕರೆಂಬಂತೆ ಮಾತನ್ನಾಡುತ್ತಿದ್ದರು. ಬೆಳಿಗ್ಗೆ ಲಿಂಗಪೂಜೆ ಆದ ಮೇಲೆ ಅವರನ್ನು ಕೂರಿಸಿ ಪಾದಪೂಜೆ ಮಾಡಿ, ಪಾದೋದಕ ಸ್ವೀಕರಿಸುತ್ತಿದ್ದರು. ಇವರು ನಮ್ಮ ಸ್ವಾಮೇರು ಎಂದು ಪರಿಚಯ ಮಾಡಿಕೊಟ್ಟಾಗ ನಮಗೆ ಗಾಬರಿಯುಂಟಾಗುತ್ತಿತ್ತು. (ಜಾತಿ) ಜಂಗಮರು ಹೇಗೇ ಇರಲಿ ಅವರನ್ನು ಗೌರವಿಸಬೇಕು ಎಂಬ ಭಾವ ಬೆಳೆಸಲು ಈ ವಚನ ರಚನೆ ಮಾಡಿರಬಹುದು ಎನಿಸುತ್ತದೆ.

(ಅದೇ ರೀತಿ ವಚನ 414 ಅಷ್ಟೆ. ಜಂಗಮರಲ್ಲಿ ಅನ್ನ, ವಸ್ತ್ರ ಧನ, ಮಾಟದಲ್ಲಿ ಎರಡಾಗಿ ಕಾಣಬಾರದು. ಎಲ್ಲರನ್ನೂ ಸಮವಾಗಿ ಕಾಣಬೇಕು ಎಂದು ಈ ವಚನದಲ್ಲಿ ಹೇಳಲಾಗಿದೆ. ಜಂಗಮನು ಇಟ್ಟುಕೊಂಡ ಧ್ಯೇಯ, ಹಾಕಿದ ಯೋಜನೆ ಮಾಡುತ್ತಿರುವ ಕಾರ್ಯ ವಿಸ್ತಾರ ಇವುಗಳನ್ನು ಗಮನಿಸಿ ಭಕ್ತನು ಕಾಣಿಕೆ ಕೊಡಬೇಕಾಗುತ್ತದೆ. ಸಮಾನವಾಗಿ ಕಾಣಲು ಹೇಗೆ ಸಾಧ್ಯ? ಅನ್ನ, ವಸ್ತ್ರ, ಮಾಟ (ಉಪಚಾರ)ಗಳಲ್ಲಿ ಎಲ್ಲರನ್ನೂ ಸಮವಾಗಿ ಕಾಣಬಹುದು. ಧನದ ವಿಷಯದಲ್ಲಿ ಸಾಧ್ಯವಾಗಲಿಕ್ಕಿಲ್ಲ).

418. ಜಂಗಮ ನಡೆ ಲಿಂಗ

ಹಿಡಿವೆಡೆಯನೆ ಕಾಸಿ ಹಿಡಿವ ಕೈ ಬೆಂದು
ಮಿಡ ಮಿಡನೆ ಮಿಡುಕುವ ಮರುಳು ಮಾನವನೆ,
ಬಡವನೆಂದೆನಬೇಡ ಲಾಂಛನಧಾರಿಯನು.
ಕಡು ನೇಹದಿಂದ ಅವರ ಪೂಜೆಯ ಮಾಡುವುದು
ನಿಜವಡಗಿದ ರೂಪು, ನಿರ್ವಯಲ ಸ್ಥಾನ.
ನಡೆಲಿಂಗ ಜಂಗಮ ಲಿಂಗದೇವಾ. - ಬ.ವ.ದೀ.416

ಕುಡುಗೋಲು, ಇಕ್ಕಳ ಮುಂತಾದ ಕಬ್ಬಿಣದ ವಸ್ತುಗಳನ್ನು ಹಿಡಿದುಕೊಳ್ಳುವಂಥ ಜಾಗದಲ್ಲಿ ಚೆನ್ನಾಗಿ ಕಾಯಿಸಿ, ಮತ್ತೆ ಅದನ್ನು ಅಲ್ಲೇ ಹಿಡಿದುಕೊಂಡರೆ ಕೈಯು ಸುಟ್ಟು ಹೋಗುವುದು. ನೋವಿನಿಂದ ಈ ಮರುಳನು ಮಿಡಮಿಡನೆ ಚಟಪಟಿಸುವನು. ಲಾಂಛನ ಧಾರಿಗಳಾಗಿ, ದೀಕ್ಷೆ ಪಡೆದು ನಂದವರನ್ನು ಬಡವರು ಎಂದು ತಿರಸ್ಕರಿಸಿದರೆ ಲಿಂಗದೇವನು ಶಿಕ್ಷಿಸುವನು. ಸಹ ಧರ್ಮಿಗಳಾದ ಶರಣರು ಬಂದಾಗ ಅತ್ಯಂತ ಪ್ರೀತಿಯಿಂದ ಅವರ ಪೂಜೆಯನ್ನು ಮಾಡಬೇಕು. ಶರಣರು ಪರಮಾತ್ಮನು ಅಡಗಿರುವ ಸ್ಥಾನ, ನಿರ್ವಯಲ ಸ್ವರೂಪನಾದ ದೇವನ ಸಾಕಾರ ರೂಪ; ಜಂಗಮ ಮೂರ್ತಿಗಳು ಚಲಿಸುವ ದೇವರು, ಜ್ಞಾನವನ್ನು ಬಿತ್ತುವವರು. ಅದಕ್ಕಾಗಿ ಅವರನ್ನು ಗೌರವಿಸಬೇಕು, ಆದರಿಸಿ, ಉಪಚರಿಸಬೇಕು.

419. ಅಂಗಹೀನರನ್ನು ಅಗೌರವಿಸಬಾರದು

ಹಾಲ ಕಂದಲು ತುಪ್ಪದ ಮಡಕೆಯ ಬೋಡು ಮುಕ್ಕೆನಬೇಡ
ಹಾಲು ಸಿಹಿ, ತುಪ್ಪ ಕಮ್ಮನೆ; ಲಿಂಗಕ್ಕೆ ಬೋನ!
ಲಿಂಗದೇವನ ಶರಣರ
ಅಂಗಹೀನರೆಂದಡೆ ಸಾಯಕ ನರಕ. - ಬ.ವ.ದೀ.417

ಹಿಂದಿನ ಕಾಲದಲ್ಲಿ ಮಣ್ಣಿನ ಮಡಿಕೆಗಳನ್ನು ಉಪಯೋಗಿಸುತ್ತಿದ್ದರು. ಹಳೆಯ ಮಡಿಕೆಗಳನ್ನು ಜೋಪಾನವಾಗಿ ಇಟ್ಟುಕೊಂಡು ಹಾಲು ಕಾಯಿಸಲು ಬಳಸುತ್ತಿದ್ದರು. ಅದೇ ರೀತಿ ತುಪ್ಪವನ್ನು ಕಾಯಿಸಲು ಮತ್ತು ಶೇಖರಿಸಲು ಪಳಗಿದ ಹಳೆಯ ಮಡಿಕೆಗಳನ್ನು ಉಪಯೋಗಿಸುತ್ತಿದ್ದರು. ಅವನ್ನು ಕಂದಲು ಎಂದು ಕರೆಯುತ್ತಿದ್ದರು. ಸೌಟು ಮುಂತಾಗಿ ಬಡಿದು ಆ ಕಂದಲುಗಳು ಕಂಠವು ಕಿತ್ತು ಮುಕ್ಕಾದರೂ ಅವನ್ನು ಬಳಸುತ್ತಿದ್ದರು. ಬೇರೆ ಮಡಿಕೆಗಳು ಮುಕ್ಕಾದರೆ ಅಮಂಗಲವೆಂದು ಆ ಮುಕ್ಕಾದ ಮಡಿಕೆಗಳನ್ನು ಬಳಸದೆ ಬೀಸಾಡುತ್ತಿದ್ದರು. ಆದೇ ಹಾಲಿನ ಕಂದಲು ತುಪ್ಪದ ಮಡಿಕೆ ಮುಕ್ಕಾಗುವುದಿರಲಿ ಪೂರ್ಣ ಕಠವು ಹೋಗಿ ಬೋಡಾದರೂ ಅವನ್ನು ಬೀಸಾಡುತ್ತಿರಲಿಲ್ಲ. ಏಕೆಂದರೆ ಅವುಗಳಲ್ಲಿ ಕಾಸಿದ ಹಾಲು ಸಿಹಿಯಾಗಿರುತ್ತದೆ, ಕಂಪಿನಿಂದ ಕೂಡಿರುತ್ತದೆ, ಊಟಕ್ಕೆ ಚಂದ. ಮಡಿಕೆಯ ಹೊರ ಆಕಾರ ಮುಖ್ಯವಲ್ಲ ಒಳಗಣ ವಸ್ತುವಿನ ಕಂಪು ಮುಖ್ಯ. ಹಾಗೆಯೇ ಲಿಂಗದೇವನ ಶರಣರ ಬಹಿರಂಗದ ಯಾವುದಾದರೂ ಅಂಗವು ಒಂದು ಊನವಾಗಿದ್ದರೇನು ಅವರ ಅಂತರಂಗದೊಳಗೆ ಭಕ್ತಿ, ಜ್ಞಾನ,

ವಿರಕ್ತಿಗಳಿದ್ದರೆ ಅವರು ಪೂಜ್ಯರು.

ಈ ವಚನದ ಮೂಲಕ ಧರ್ಮಪಿತ ಬಸವಣ್ಣನವರು ಅಂಗವಿಕಲರ ಹಕ್ಕುಗಳನ್ನು ಎತ್ತಿ ಹಿಡಿದಿದ್ದಾರೆ ಎನ್ನಬಹುದು.

420. ನುಡಿ ನಡೆ ಒಂದಾಗಬೇಕು.

ಆಚಾರವನರಿಯಿರಿ ವಿಚಾರವನರಿಯಿರಿ;
ಜಂಗಮಸ್ಥಲ ಲಿಂಗ ಕಾಣಿರಯ್ಯಾ,
ಜಾತಿ ಭೇದವಿಲ್ಲ, ಸೂತಕವಿಲ್ಲ, ಅಜಾತಂಗೆ ಕುಲವಿಲ್ಲ
ನುಡಿದಂತೆ ನಡೆಯದಿದ್ದಡೆ
ಲಿಂಗದೇವಯ್ಯ ಮೆಚ್ಚ ಕಾಣಿರಯ್ಯಾ! - ಬ.ವ.ದೀ.418

ಒಂದು ನಾಣ್ಯಕ್ಕೆ ಎರಡು ಮುಖಗಳು ಹೇಗೋ ಹಾಗೆ ಧರ್ಮಕ್ಕೆ ಆಚಾರ ಮತ್ತು ವಿಚಾರ. ವಿಚಾರವು ಸಿದ್ಧಾಂತ ರೂಪದಲ್ಲಿದ್ದರೆ ಆಚಾರವು ಪ್ರಯೋಗಾತ್ಮಕವಾಗಿರುತ್ತದೆ. ನಿಜವಾದ ಧರ್ಮಾನುಯಾಯಿ ಮೊದಲು ಧರ್ಮದ ಅರಿವು ಹೊಂದಬೇಕು. ನಂತರ ಅದನ್ನು ಆಚರಣೆಗೆ ತರಬೇಕು. ಕೆಲವರು ವಿಚಾರ ಮತ್ತು ಆಚಾರ ಎರಡನ್ನೂ ಅರಿಯದೆ ಯಾಂತ್ರಿಕವಾಗಿ ಪೂಜಾದಿ ಕ್ರಿಯೆಗಳನ್ನು ಮಾಡುತ್ತಾರೆ. ಲಿಂಗಾಯತ ಧರ್ಮದ ಸಿದ್ಧಾಂತದ ಪ್ರಕಾರ ಲಿಂಗದೇವನು ಗುರು-ಇಷ್ಟಲಿಂಗ-ಜಂಗಮ ಸ್ವರೂಪದಲ್ಲಿ ಕಾಣಿಸಿಕೊಳ್ಳುವನು. ಆದ್ದರಿಂದ ಜಂಗಮರಲ್ಲಿ ಪೂರ್ವದ ಜಾತಿಯನ್ನು ಅರಸಬಾರದು. ಸೂತಕವನ್ನು ಮತ್ತು ಕುಲವನ್ನು ಹುಡುಕಬಾರದು. ನಮ್ಮ ಧರ್ಮ ಹಾಗಿದೆ, ಹೀಗಿದೆ ಎಂದೆಲ್ಲ ತತ್ವಗಳನ್ನು ಹೆಮ್ಮೆಯಿಂದ ಹೇಳಿ ಆಚರಣೆಯಲ್ಲಿ ಆ ತತ್ವಗಳನ್ನು ಅನುಸರಿಸದಿದ್ದರೆ ಲಿಂಗದೇವನು ಮೆಚ್ಚಿಕೊಳ್ಳನು.

421. ನಿಸ್ಸೀಮವಾದ ಭಕ್ತಿ

ಸ್ಥಾವರ ಭಕ್ತಂಗೆ ಸೀಮೆಯಲ್ಲದೆ
ಘನಲಿಂಗ, ಜಂಗಮಕ್ಕೆ ಸೀಮೆಯೆಲ್ಲಿಯದು?
ಅಂಬುಧಿಗೆ ಸೀಮೆಯಲ್ಲದೆ
ಹರಿವ ನದಿಗೆ ಸೀಮೆಯೆಲ್ಲಿಯದು?
ಭಕ್ತಂಗೆ ಸೀಮೆಯಲ್ಲದೆ
ಜಂಗಮಕ್ಕೆ ಸೀಮೆಯುಂಟೆ, ಲಿಂಗದೇವಾ - ಬ.ವ.ದೀ.419

ಸ್ಥಾವರ ದೇವಾಲಯಗಳ ಭಕ್ತನಿಗೆ ಒಂದು ಸೀಮಿತತೆ ಉಂಟು. ಅವನು ದೇವರು ಗರ್ಭಗುಡಿಯಲ್ಲೇ ಇದ್ದಾನೆಂದು ನಂಬುತ್ತಾನೆ. ಗರ್ಭಗುಡಿಯಲ್ಲಿ ನೆಲೆ ನಿಂತಿರುವ ವಿಗ್ರಹಕ್ಕೆ ಅಭಿಷೇಕ ಮಾಡಿಸುವುದು, ಅದಕ್ಕೆ ವಸ್ತ್ರ ಉಡಿಸುವುದು, ಬೆಣ್ಣೆ ಅಲಂಕಾರ, ಹೂವಿನ ಅಲಂಕಾರ ಮಾಡಿಸುವುದರಲ್ಲಿ ಆಸಕ್ತಿ. ಆದರೆ ಘನಲಿಂಗದೇವನ ಭಕ್ತನದು, ಜಂಗಮ ಭಕ್ತನದು ನಿಸ್ಸೀಮವಾದ ಭಕ್ತಿ. ಏಕೆಂದರೆ ಲಿಂಗದೇವನು ಸರ್ವಶಕ್ತ, ಸರ್ವವ್ಯಾಪಿ, ಸರ್ವಜ್ಞ. ಸಮುದ್ರಕ್ಕೆ ಒಂದು ಎಲ್ಲೆಯಿದೆ, ನದಿಯು ಸಲ್ಲೀಲೆಯಿಂದ ಹರಿಯುತ್ತ ಸಾಗುವುದು. ಹಾಗೆ ಸ್ಥಾವರ ಭಕ್ತನ ಭಕ್ತಿ ಸೀಮಿತವಾದರೆ, ಜಂಗಮ ಭಕ್ತನ ಭಕ್ತಿ ನಿಸ್ಸೀಮ.

ಭಕ್ತನು ಮುಖ್ಯವಾಗಿ ಗೃಹಸ್ಥನು, ಕಾಯಕ ಜೀವಿ, ಜಂಗಮನು ವಿರಕ್ತ ತ್ಯಾಗಜೀವಿ. ಅವನಿಗೂ ಕಾಯಕ ಉಂಟು. ಆದರದು ಜ್ಞಾನಾತ್ಮಕ ಕಾಯಕ, ವಿಶ್ವಕಲ್ಯಾಣದ ಕಾಯಕ. ಒಂದು ವಚನದಲ್ಲಿ ಅಲ್ಲಮ ಪ್ರಭುದೇವರು ಹೀಗೆ ಹೇಳುವರು:

"ನಿಂದರೆ ಹೆಣ್ಣು ಹೊನ್ನು ಮಣ್ಣು ಹಿಡಿದು ನೆಟ್ಟನೆ ಭಕ್ತನಾಗಿ ನಿಲ್ಲಬೇಕು. ಸುಳಿದರೆ ಹೆಣ್ಣು

ಹೊನ್ನು ಮಣ್ಣು ಬಿಟ್ಟು ಜಂಗಮವಾಗಿ ಸುಳಿಯಬೇಕು. ಭಕ್ತನು ಹೆಂಡತಿ ಮಕ್ಕಳನ್ನು, ಜವಾಬ್ದಾರಿಯನ್ನು, ಕಾಯಕ -ಕರ್ತವ್ಯಗಳನ್ನು ಬಿಟ್ಟು ತಿರುಗಬಾರದು. ಜಂಗಮ ಧರ್ಮ ಪ್ರಚಾರ ಇಲ್ಲದೆ ನಿಂತ ನೀರಾಗದೆ ಹರಿಯುವ ನದಿಯಂತಾಗಬೇಕು, ತಂಗಾಳಿಯಂತೆ ಜ್ಞಾನದ ಕಂಪನ್ನು ಹೊತ್ತು ಸುಳಿಯಬೇಕು. ಹೀಗೆ ಭಕ್ತನಿಗೆ ಸೀಮೆ ಇದೆ; ಜಂಗಮನಿಗೆ ಸೀಮೆಯಿಲ್ಲ.

422. ಜಂಗಮ ನಿಂದೆ ಬೇಡ

ಎತ್ತಿಕೊಳ್ಳಲೇಕೆ ಮತ್ತಿಳುಹಲೇಕಯ್ಯಾ?
ಧರಧುರದ ಭಕ್ತಿಯ ಮಾಡಲೇಕಯ್ಯಾ?
ನಿಂದಿಸಲೇಕೆ, ಸ್ತುತಿಸಲೇಕೆ?
ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದಡೆ
ನರಕ ತಪ್ಪದು ಕಾಣಾ,
ಹೋಗಬಿಟ್ಟು ಜಂಗಮವ ಹಿಂದೆಯಾಡುವನ ಬಾಯಲ್ಲಿ
ಮೆಟ್ಟ ಹುಡಿಯ ಹೊಯ್ಯದೆ ಮಾಣ್ಬನೆ, ಲಿಂಗದೇವಾ? - ಬ.ವ.ದೀ.420

ಜನರ ನಡೆಯೇ ಬಲು ವಿಚಿತ್ರ. ಯಾರಾದರೂ ಹೊಸದಾಗಿ ಬರುತ್ತಲೇ ಅವರನ್ನು ಅಟ್ಟಕ್ಕೇರಿಸಿ ಗೌರವಿಸುತ್ತಾರೆ. ಸ್ವಲ್ಪೇ ದಿನಗಳ ನಂತರ ಅವರನ್ನು ತೆಗಳಲಾರಂಭಿಸುತ್ತಾರೆ. ಧರಧುರದ ಆತುರದ ಭಕ್ತಿಯನ್ನು ಮಾಡುತ್ತಾರೆ. ಒಮ್ಮೆ ಸ್ತುತಿಸುತ್ತಾರೆ ಮತ್ತೊಮ್ಮೆ ನಿಂದಿಸುತ್ತಾರೆ. ಈ ಪ್ರವೃತ್ತಿ ಸರಿಯಲ್ಲ. ಎದುರಿಗೆ ಇರುವ ತನಕ ಅವರನ್ನು ಹೊಗಳಿ, ಗೌರವಿಸುವಂತೆ ನಟಿಸಿ ಅವರು ತೆರಳಿದ ನಂತರ ಬೆನ್ನ ಹಿಂದೆ ಆಡಿಕೊಳ್ಳುವವನ ಬಾಯಿಯಲ್ಲಿ ಲಿಂಗದೇವನು ಮೆಟ್ಟಿನ ಧೂಳನ್ನು ಹಾಕದೆ ಬಿಡುವನೆ? ಅಂದರೆ ಶಿಕ್ಷಿಸದೆ ಇರುವನೆ?

423. ಲಿಂಗದ ಬಾಯಿ ಜಂಗಮ

ಮರದ ಬಾಯಿ ಬೇರೆಂದು ತಳಕ್ಕೆ ನೀರನೆರೆವಡೆ
ಮೇಲೆ ಪಲ್ಲವಿಸಿತ್ತು ನೋಡಾ
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ
ಮುಂದೆ ಸಕಲ ಪದಾರ್ಥವನೀವನು ಕಾಣಾ, ಲಿಂಗದೇವಾ. - ಬ.ವ.ದೀ. 421

ಗಿಡವು ಎಷ್ಟು ಎತ್ತರಕ್ಕೆ ಬೆಳೆದರೇನು ಅದರ ಬಾಯಿ ಬೇರು, ಅದು ಭೂಮಿ ಕೆಳಗಿರುವುದು. ಗಿಡಕ್ಕೆ ನೀರೆರೆಯಬೇಕೆನ್ನುವವರು ಬೇರಿಗೆ ನೀರೆರೆಯುತ್ತಾರೆ. ಬೇರು ನೀರನ್ನು ಹೀರಿಕೊಂಡಾಗ ಗಿಡವು ಮೇಲೆ ಪಲ್ಲವಿಸುತ್ತದೆ. ಅದೇ ರೀತಿ ಲಿಂಗದೇವನು ನಿರಾಕಾರ, ಅವನ ಬಾಯಿಯೇ ಜಂಗಮ. ಇಲ್ಲಿ ಜಂಗಮವೆಂದರೆ ಪೂಜ್ಯರಾದ ತ್ಯಾಗಿಗಳು, ಧರ್ಮಪ್ರಚಾರಕರು ಮತ್ತು ಜಂಗಮವೆಂದರೆ ಚೈತನ್ಯ ಶೀಲವಾದ ಸಮಾಜ, ದೀನರು, ದುಃಖಿತರು, ಹಸಿದವರು ಮುಂತಾಗಿ ಅರ್ಥ ಮಾಡಬಹುದು. ಜಂಗಮಕ್ಕೆ ನೀಡಿದರೆ ಲಿಂಗದೇವನು ಸಂತೃಪ್ತನಾಗುವನು ಎಂಬ ಭಾವವಿಲ್ಲಿದೆ. ವೈದಿಕರು ಅಗ್ನಿದೇವರೆನ್ನುವರು, ಅಗ್ನಿ ಮುಖದಲ್ಲಿ ದೇವರಿಗೆ ಸಮರ್ಪಿಸಬೇಕು ಎಂದು ಬೆಲೆ ಬಾಳುವ ಪೀತಾಂಬರ, ರೇಷ್ಮೆ ವಸ್ತ್ರ ಚಂದನ, ತುಪ್ಪ ಮುಂತಾದ ಉಪಯುಕ್ತ ವಸ್ತುಗಳನ್ನು ಸುಡುವರು. ದೇವರಿಗೆ ಅರ್ಪಿಸುತ್ತೇವೆ ಎಂದು ಜಡ ವಿಗ್ರಹಗಳಿಗೆ ರತ್ನ ಖಚಿತ ಚಿನ್ನದ ಕಿರೀಟ, ವಜ್ರದ ಕವಚ ತೊಡಿಸುವರು. ಲಿಂಗಾಯತ ಧರ್ಮದಲ್ಲಿ ಇದು ನಿಷಿದ್ಧ. ವಸ್ತುಗಳನ್ನು ಉಪಯೋಗಕ್ಕೆ ಬರುವಂತೆ ಜಂಗಮಕ್ಕೆ ನೀಡಬೇಕೇ ವಿನಾ ಸುಟ್ಟು, ಚೆಲ್ಲಿ ಕೆಡಿಸಬಾರದು. ಜಂಗಮಕ್ಕೆ ನೀಡಿದ್ದು ಪುನಃ ಸಮಾಜಕ್ಕೆ ವಿನಿಯೋಗವಾಗುತ್ತದೆ. ಚೈತನ್ಯಶಾಲಿ ಜಂಗಮಕ್ಕೆ ನೀಡಿದರೆ ಲಿಂಗದೇವನು ಯಥೇಚ್ಛವಾಗಿ ಸಂಪತ್ತನ್ನು ಕೊಡುವನು.

ಜಂಗಮವನ್ನು ಮೊದಲು ಹರನ ಸಮಾನ ಎಂದು ಗೌರವಿಸಿ ನಂತರ ನರ ಮಾನವನಂತೆ ಕಂಡು ಅಗೌರವಿಸಿದರೆ ಲಿಂಗದೇವನು ಶಿಕ್ಷಿಸುವನು. ಅಂಥ ಭಕ್ತನಿಗೆ ನರಕ (ಯಾತನೆಯು)ವು ಪ್ರಾಪ್ತಿಯಾಗುವುದು.

424. ನೈತಿಕ ಭಯ

ಆರಾಧನೆಯ ಮಾಡಿದಡೆ ಅಮೃತದ ಬೆಳೆಸು;
ವಿರೋಧಿಸಿದಡೆ ವಿಷದ ಬೆಳಸು.
ಇದು ಕಾರಣ ಲಿಂಗಜಂಗಮಕ್ಕೆ ಅಂಜಲೇಬೇಕು.
ಸ್ಥಾವರ ಜಂಗಮ ಒಂದೆಂದರಿದಡೆ
ಲಿಂಗದೇವ ಶರಣಸನ್ನಿಹಿತ. - ಬ.ವ.ದೀ. 422

ಗುರುಹಿರಿಯರನ್ನು, ಜಂಗಮರನ್ನು ಆದರಿಸಿ ಗೌರವಿಸಿದರೆ ಅವರ ವಾತ್ಸಲ್ಯ, ಅನುಗ್ರಹ ಎಂಬ ಅಮೃತದ ಬೆಳೆಸು ದೊರೆಯುತ್ತದೆ. ನಿಂದಿಸಿದರೆ, ವಿರೋಧಿಸಿದರೆ, ಅಗೌರವಿಸಿದರೆ ಅವರ ಕೋಪ ಎಂಬ ವಿಷದ ಬೆಳೆಸು ಪ್ರಾಪ್ತಿಯಾಗುತ್ತದೆ. ಅವರನ್ನು ನೋಯಿಸಿದರೆ ತಾಪವು ಪ್ರಾಪ್ತಿಯಾಗುತ್ತದೆ. ಆದ್ದರಿಂದ ವ್ಯಕ್ತಿಯು ಲಿಂಗ ಮತ್ತು ಜಂಗಮಕ್ಕೆ ಅಂಜಲೇಬೇಕು.

ಸೃಷ್ಟಿಕರ್ತನು ಸರ್ವಜ್ಞನು ಎಲ್ಲ ಕಾರ್ಯಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುವವನು. ಯಾರ ಕಣ್ಣು ತಪ್ಪಿಸಿದರೂ ಆ ದೇವನ ಕಣ್ಣು ತಪ್ಪಿಸಲು ಸಾಧ್ಯವಿಲ್ಲ; ಆ ದೇವನು ಅಂತರಾತ್ಮವಾಗಿ ಜೀವಿಯಲ್ಲಿ ಕೆಲಸ ಮಾಡುವನು. ಅಂತರಾತ್ಮವು ನ್ಯಾಯಾಧೀಶನಿದ್ದಂತೆ. ಅದೇ ರೀತಿ ಜಂಗಮಕ್ಕೆ ಅಂಜಲೇಬೇಕು. ಜ್ಞಾನಿಯಾದ ಜಂಗಮನು ಇದು ತಪ್ಪು ಎಂದು ಹೇಳುವುದನ್ನು ಗೌರವಿಸಿ ತಿದ್ದಿಕೊಳ್ಳಬೇಕು. ಸಮಾಜವು ಇದು ಸರಿಯಲ್ಲ ಎಂದು ಹೇಳಿದಾಗ ಅಂತರವಲೋಕನ ಮಾಡಿಕೊಂಡು ತಿದ್ದಿಕೊಳ್ಳಬೇಕು. ಸ್ಥಾವರ ಜಂಗಮ ಒಂದೆಂದರಿದಡೆ ಲಿಂಗದೇವ ಶರಣ ಸನ್ನಿಹಿತ. ಇಲ್ಲಿ ಸ್ಥಾವರ ಪದಕ್ಕೆ ನಿರಾಕಾರ ದೇವರು, ಜಂಗಮ ಪದಕ್ಕೆ ಸಮಾಜ ಎಂದು ಅರ್ಥ ಮಾಡಬೇಕು. ಸಮಾಜವು ನಿರಾಕಾರ ದೇವರ ಮುಖ ಎಂಬ ಭಾವ ತಳೆಯಬೇಕು.

425.ಜಂಗಮದ ಉದಾಸೀನ ಸಲ್ಲದು

ಹೊಸತಿಲ ಪೂಜಿಸಿ ಹೊರವಂಟು ಹೋದ
ಒಕ್ಕಲಿತಿಯಂತಾಯಿತೆನ್ನ ಭಕ್ತಿ.
ಜಂಗಮವೆನ್ನೊಡೆಯರೆಂದು ಒಕ್ಕುದ ಕೊಂಡು
ಉದಾಸೀನವ ಮಾಡಿದಡೆ
ಇಹಕ್ಕೆ ದೂರ, ಪರಕ್ಕೆ ದೂರ
ಲಿಂಗದೇವ ಅಘೋರ ನರಕದಲ್ಲಿಕ್ಕುವ. - ಬ.ವ.ದೀ. 423

ಮೂಢ ಜನರು ಹೊಸ್ತಿಲನ್ನು ಪೂಜಿಸುತ್ತಾರೆ. ಹೊಸ್ತಿಲು ದೇವರೇ ಆದರೆ ಅದನ್ನು ತುಳಿದು ದಾಟುವುದೇಕೆ? ಒಕ್ಕಲಿತಿಯು (ಮೂಢ) ಭಕ್ತಿಯಿಂದ ಹೊಸ್ತಲು ಪೂಜಿಸಿ ನಂತರ ಅದನ್ನು ತುಳಿದು ಕೊಂಡು ಹೋಗಿ ಬಿಡುವಳು. ಅದೇ ರೀತಿ ಜಂಗಮರು ಎನ್ನ ಒಡೆಯರೆಂದು ಕರೆದು ಆಹ್ವಾನಿಸಿ, ಅವರಿಂದ ಕರುಣ ಪ್ರಸಾದ ಪಡೆದುಕೊಂಡು ನಂತರ ಅವರನ್ನು ಉದಾಸೀನದಿಂದ ಕಂಡರೆ ಅಂಥ ಭಕ್ತನು ಸಮಾಜದಿಂದಲೂ ದೂರವಾಗುವನು; ಲಿಂಗದೇವನ ಅವಕೃಪೆಗೂ ಪ್ರಾಪ್ತನಾಗುವನು. ದೇವರು ಅಂಥ ಅರೆಬರೆ ಭಕ್ತನನ್ನು ನರಕ ಯಾತನೆಗೆ ಒಳಪಡಿಸುವನು.

426.ಶಿವದೂತರ ದಂಡ

ಲಿಂಗದ ಪೂಜೆಯ ಮಾಡಿ ಜಂಗಮವ ಕಂಡು ಉದಾಸೀನವ ಮಾಡಿದಡೆ
ಆ ಲಿಂಗ ಪೂಜಕರಿಗೆ ಮಾಡಿದ ಶಿವದೂತರ ದಂಡವೆಂಬುದ.
ಲೋಕದ ಕರ್ಮಿಗಳಿಗೆ ಮಾಡಿದ ಯಮದೂತರ ದಂಡವೆಂಬುದ
ಇದು ಕಾರಣ ಲಿಂಗ ಜಂಗಮವನೊಂದೆಂದರಿಯದವರ
ಎನಗೆ ತೋರದಿರಯ್ಯಾ; ಲಿಂಗದೇವಾ. - ಬ.ವ.ದೀ. 424

ಇಷ್ಟಲಿಂಗವನ್ನು ಶ್ರದ್ಧೆಯಿಂದ ಭಕ್ತಿಪೂರ್ಣವಾಗಿ ಪೂಜಿಸುತ್ತಲಿದ್ದರೂ ಜಂಗಮರ ಕುರಿತು ಉದಾಸೀನ ಮಾಡುವ ಕೆಲವು ಜನರಿರುವರು. ಇವರುಗಳು ತಮ್ಮ ಮನೆಗೆ ಒಮ್ಮೆಯಾದರೂ ಜಂಗಮರನ್ನು ಆಹ್ವಾನಿಸರು; ಕರುಣ ಪ್ರಸಾದ ಪಡೆದುಕೊಳ್ಳರು. ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸರು, ದಾನ ಧರ್ಮ ಮಾಡರು. (ಬೆಂಗಳೂರಿನಂಥ ನಗರದಲ್ಲಿ ಇದನ್ನು ಚೆನ್ನಾಗಿ ಕಾಣ ಬಹುದು. ಕೆಲವರು ಇಡೀ ಜೀವಮಾನದಲ್ಲೇ ತಮ್ಮ ಮನೆಗೆ ಎಂದೂ ಗುರು - ಜಂಗಮರನ್ನು ಬರಮಾಡಿಕೊಳ್ಳರು) ಇಂಥ ಅರ್ಧಭಕ್ತರಿಗೆ ಶಿವದೂತರ ದಂಡನೆ ಅಂದರೆ ಸೌಮ್ಯವಾದ ಶಿಕ್ಷೆ ಪ್ರಾಪ್ತವಾಗುತ್ತದೆ. ಇಷ್ಟಲಿಂಗ ಪೂಜೆ ಮಾಡುವ ಕಾರಣ ಅವರಿಗೆ ಅರ್ಧ ಅಂಕಗಳು ಬೀಳುತ್ತವೆ. ಜಂಗಮರ ಆರಾಧನೆ ಮಾಡದ ಕಾರಣ ಇನ್ನರ್ಧ ಅಂಕಗಳು ಲಭ್ಯವಾಗುವುದಿಲ್ಲ.

ಇನ್ನು ಇಷ್ಟಲಿಂಗ ಪೂಜೆಯನ್ನೂ ಮಾಡದ, ಜಂಗಮ ಆರಾಧನೆಯನ್ನೂ ಮಾಡದ ಲೋಕದ ಕರ್ಮಿಗಳಿಗೆ ಯಮದೂತರ ದಂಡನೆ ಅಂದರೆ ಕ್ರೂರವಾದ ಶಿಕ್ಷೆಯೇ ಪ್ರಾಪ್ತಿ. ಆದ್ದರಿಂದ ಧರ್ಮಪಿತರು ಇಷ್ಟಲಿಂಗ ಪೂಜೆ, ಜಂಗಮ ಆರಾಧನೆ ಎರಡೂ ಮಾಡದವರ ಮುಖವನ್ನು ಸಹ ನೋಡಲು ಇಷ್ಟಪಡುವುದಿಲ್ಲ.

ಸಾಂಪ್ರದಾಯಿಕ ಉಲ್ಲೇಖಗಳು

ಧರ್ಮಪಿತ ಬಸವಣ್ಣನವರು ದೇವಲೋಕ ಮೃತ್ಯುಲೋಕ, ಸ್ವರ್ಗ -ನರಕಗಳನ್ನು ನಂಬುವವರಲ್ಲ. ಶಿವದೂತರು, ಯಮದೂತರನ್ನು ನಂಬುವುದಾದರೆ ಆಗ ಶಿವಲೋಕ (ಕೈಲಾಸ), ನರಕಗಳನ್ನು ನಂಬಬೇಕಾಗುತ್ತದೆ. ಅನೇಕ ವಚನಗಳಲ್ಲಿ ದೇವಲೋಕ ಮರ್ತ್ಯಲೋಕವೆಂಬವು ಬೇರಿಲ್ಲ ಕಾಣಿರೋ ಎಂದು ಹೇಳಿದ್ದಾರೆ. ಅವರ ಪ್ರಕಾರ ಜೀವಾತ್ಮವು ಅನೇಕ ಜನ್ಮಗಳಲ್ಲಿ ಸಂಚರಿಸಿ ಶರಣನ (ಕಡೆಯ) ಜನ್ಮದಲ್ಲಿ ಲಿಂಗದೇವನೊಡಗೂಡಿ ಉರಿಯುಂಡ ಕರ್ಪೂರದಂತೆ ಸಮರಸ ಹೊಂದುತ್ತದೆ. ಮುಕ್ತಾತ್ಮನಾಗದವನು ಮರು ಜನ್ಮ ಪಡೆದು ತನ ಹಿಂದಿನ ಜನ್ಮದ ಕರ್ಮಾನುಸಾರ ಪುಣ್ಯಪ್ರದಾಯಕ ಅಥವಾ ಪಾಪಾತ್ಮಕ ಸುಖ-ದುಃಖಗಳನ್ನು ಅನುಭವಿಸುತ್ತಾನೆಯೇ ಹೊರತು ಯಾವುದೇ ಸ್ವರ್ಗ ನರಕಗಳಿಗೆ ಹೋಗುವುದಿಲ್ಲ.

ಇಂಥ ಪರಿಕಲ್ಪನೆ ಹೊಂದಿದ್ದೂ ಧರ್ಮಪಿತ ಬಸವಣ್ಣನವರು ತಮ್ಮ ವಚನಗಳಲ್ಲಿ ನರಕದಲ್ಲಿಕ್ಕುವ ನರಕದೊಳದ್ದುವ, ಶಿವದೂತರ ದಂಡನೆ, ಯಮದೂತರ ದಂಡನೆ ಎನ್ನುವುದನ್ನು ನೋಡಿದಾಗ ಸೋಜಿಗ ಮತ್ತು ಗೊಂದಲ ಉಂಟಾಗುವುದಾದರೂ ಆ ಉಲ್ಲೇಖಗಳು ಸಾಂಪ್ರದಾಯಿಕವಾಗಿ ರೂಢಿಯಲ್ಲಿರುವ ಉಲ್ಲೇಖಗಳು ಎಂದು ಅರ್ಥ ಮಾಡಬಹುದು.

427. ಗುರುವಿನ ಗುರು ಜಂಗಮ

ಜಂಗಮ ನಿಂದೆಯ ಮಾಡಿ, ಲಿಂಗವ ಪೂಜಿಸುವ
ಭಕ್ತನ ಅಂಗವಣೆಯೆಂತೊ?
ಶಿವ ಶಿವಾ, ನಿಂದಿಸುವ ಪೂಜಿಸುವ ಪಾತಕವಿದ ಕೇಳಲಾಗದು.
ಗುರುವಿನ ಗುರು ಜಂಗಮ-
ಇಂತೆಂದುದು ಲಿಂಗದೇವನ ವಚನ. - ಬ.ವ.ದೀ. 425

ಜಂಗಮ ನಿಂದೆಯನ್ನು ಮಾಡಿ ಕೇವಲ ಇಷ್ಟಲಿಂಗ ನಿಷ್ಠೆಯನ್ನು ತೋರಿಸುವ ಭಕ್ತನ ಧಾರ್ಮಿಕ ಚಟುವಟಿಕೆ ಎಷ್ಟರ ಮಟ್ಟಿಗೆ ಯಶಸ್ವಿಯಾದೀತು? ಒಮ್ಮೆ ಪೂಜಿಸುವುದು ಮತ್ತೊಮ್ಮೆ ನಿಂದಿಸುವುದು ಒಂದು ಬಗೆಯ ಪಾಪಾತ್ಮಕ ಚಟುವಟಿಕೆ. ದೀಕ್ಷಾಗುರುವಿಗೂ ಮೇಲಿನದು ಜಂಗಮನ ಸ್ಥಾನ ಎಂಬುದನ್ನು ಅರಿಯಬೇಕು.

ಗುರು ಬಸವಣ್ಣನವರು ಜಂಗಮರಿಗೆ ಕೊಟ್ಟ ಸ್ಥಾನ, ಮಹತ್ವ ನೋಡಿದರೆ ಆಶ್ಚರ್ಯವಾಗುತ್ತದೆ ಮತ್ತು ಸ್ವಲ್ಪ ಅತಿಯೇ ಎನಿಸುತ್ತದೆ. ಕಾಲಮಾನ ದೃಷ್ಟಿಯಿಂದ ನೋಡಿದಾಗ ಅಂದಿನ ಜಂಗಮರು ಜ್ಞಾನಿಗಳು, ತ್ಯಾಗಿಗಳು ಇದ್ದು ವಿಶ್ವಾಸಾರ್ಹರು, ಗೌರವಾರ್ಹರು ಎನಿಸಿಕೊಳ್ಳುತ್ತಾರೆ. ಇಂದು ಜಂಗಮ ಒಂದು ಜಾತಿಯಾಗಿ ವಿಕೃತಗೊಂಡಿರುವುದು ಒಂದಾದರೆ, ನಿಜ ಜಂಗಮರು ಸಿಗುವುದು ದುರ್ಲಭ. ಕಾವಿ ಧಾರಿಗಳನ್ನೆಲ್ಲ ಜಂಗಮರು ಎಂದು ಮನೆಯಲ್ಲಿ ಬಿಟ್ಟುಕೊಂಡರೆ ಅಪಾಯವು ತಪ್ಪಿದ್ದಲ್ಲ. ಆದರೆ ಜಂಗಮದ ಸಂಬಂಧ ಅತ್ಯಗತ್ಯ ಎಂದು ಧರ್ಮಪಿತರು ಒತ್ತಿ ಹೇಳುವುದನ್ನು ನಾವು ಬೇರೊಂದು ರೀತಿಯಲ್ಲಿ ಪ್ರಯೋಗಕ್ಕೆ ತರಬಹುದು.

ಮುಸಲೀಮರು, ಕ್ರೈಸ್ತರಲ್ಲಿ ಮೌಲ್ವಿಗಳು, ಫಾದರ್‌ಗಳ ಸಂಬಂಧವು ಸಾಮಾಜಿಕವಾಗಿ ಇರುವುದೇ ವಿನಾ ವೈಯಕ್ತಿಕವಾಗಿ ಇರುವುದಿಲ್ಲ. ಮಸೀದಿಯಲ್ಲಿನ ಗುರು ಯಾರಾದರೇನು ನಮಾಜ್‌ಗೆ ಹೋಗುವುದು ಕರ್ತವ್ಯ ಎಂದು ಮುಸಲೀಮರು ಹೋಗುತ್ತಾರೆ. ಚರ್ಚಿನಲ್ಲಿನ ಗುರು ಯಾರಾದರೇನು ಕ್ರೈಸ್ತರು ವಾರದ ಪ್ರಾರ್ಥನೆಗೆ ಹೋಗುತ್ತಾರೆ. ಹಿಂದುಗಳಲ್ಲಿ, ಲಿಂಗಾಯತರಲ್ಲಿ ಅಂಥ ಸಾಮಾಜಿಕ ವ್ಯವಸ್ಥೆ ಇರದೆ ಯಾರಾದರೊಬ್ಬ ವ್ಯಕ್ತಿಯ ಪ್ರಭಾವಕ್ಕೆ ಒಳಗಾಗಿ ದುಡುದುಡು ಹೋಗುತ್ತಾರೆ. ಆತನ ಬಗ್ಗೆ ವಿರೋಧಿಗಳು ಅಪಪ್ರಚಾರ ಮಾಡಿದರೆ ಹೋಗುವುದನ್ನೇ ಕೈ ಬಿಡುತ್ತಾರೆ. ಬಹುಶಃ ಇಂಥ ಭಕ್ತರಿಗೆ ಧರ್ಮಪಿತರು ಹೇಳಿರಬೇಕು, ಜಂಗಮ ನಿಂದೆಯ ಮಾಡಿ ಲಿಂಗವ ಪೂಜಿಸುವ ಅಂಗವಣೆ ಎಂತೋ ಎಂದು. ಒಂದು ವೇಳೆ ಜಂಗಮನ ನಡತೆ ಸರಿ ಇಲ್ಲದಿದ್ದರೆ ಜ್ಞಾನವನ್ನು ಪಡೆಯುವ ಮಟ್ಟಿಗೆ ಸಾಮಾಜಿಕ ಸಂಬಂಧ ಇರಿಸಿಕೊಂಡು ವೈಯಕ್ತಿಕ ಸಂಬಂಧ ಇರಿಸಿಕೊಳ್ಳಬಾರದು.

428. ಪರ ಮತ ನಿರಾಕರಣೆ

ಅರಸನ ಕಂಡು ತನ್ನ ಪುರುಷನ ಮರೆದಡೆ
ಮರನನೇರಿ ಕಯ್ಯ ಬಿಟ್ಟಂತಾದೆನಯ್ಯಾ.
ಇಹಕ್ಕೆ ದೂರ ಪರಕ್ಕೆ ದೂರ!
ನಮ್ಮ ಲಿಂಗದೇವಯ್ಯ
ಜಂಗಮಮುಖ ಲಿಂಗವಾದ ಕಾರಣ
– ಬ.ವ.ದೀ. 426

ಒಬ್ಬ ರಾಜನ ಮೆರವಣಿಗೆ ಹೋಗುತ್ತಿರುತ್ತದೆ ಎಂದು ಕೊಳ್ಳೋಣ. ಆಗ ಓರ್ವ ಗೃಹಿಣಿ ಅದನ್ನು ನೋಡಿ ಆಕರ್ಷಿತಳಾಗುತ್ತಾಳೆ. ಮೆರವಣಿಗೆಯಲ್ಲಿರುವ ದಾಸಿಯರು ಉಟ್ಟ ಉಡುಗೆ, ತೊಡುಗೆ ನೋಡಿ ಪರವಶಳಾಗಿ ಮೆರವಣಿಗೆಯ ಹಿಂದೆಯೇ ಹೋಗುತ್ತಾಳೆ. ಅರಮನೆಯೊಳಕ್ಕೆ ಈ ಆಗಂತುಕಳನ್ನು ಬಿಡದೆ ಅಟ್ಟುತ್ತಾರೆ. ಮನೆಯ ಕಡೆ ಬರುತ್ತಾಳೆ. ಅಷ್ಟು ಹೊತ್ತಿಗೆ ಗಂಡನಿಗೆ ವಿಷಯ ತಿಳಿದಿದ್ದು ಇವಳು ಅರಸನಿಗೆ ಮೋಹಿತಳಾಗಿದ್ದಾಳೆ ಎಂದು ಗಂಡನು ಮನೆಯೊಳಕ್ಕೆ ಬಿಟ್ಟುಕೊಳ್ಳಲು ನಿರಾಕರಿಸುತ್ತಾನೆ. ಆಗ ಈಕೆ ಮರವನ್ನು ಏರಿ ಕೈ ಬಿಟ್ಟಾಗ ದೊಪ್ಪನೆ ಬೀಳುವಂತೆ ಅತಂತ್ರಳಾಗುತ್ತಾಳೆ.

ಲಿಂಗಾಯತ ಧರ್ಮೀಯರು ಸದಾ ತಮ್ಮ ಗುರು, ಜಂಗಮರ ಸಂಪರ್ಕದಲ್ಲಿದ್ದು ಸ್ವಧರ್ಮದ ಅಧ್ಯಯನ, ಆಚರಣೆ ಮಾಡಬೇಕು. ಅನ್ಯ ಮತ ಪ್ರಚಾರಕರ ಆಕರ್ಷಣೆಗೆ ಒಳಗಾಗಿ ತನ್ನ ಧರ್ಮ ಲಾಂಛನ ತೊರೆದು ಹೋದರೆ ಇವರ ಪರಿಸ್ಥಿತಿ ಅತಂತ್ರವಾಗಿ ಅರಸನ ಕಂಡು ತನ್ನ ಗಂಡನನ್ನು

ಮರೆತಂತೆ, ಮರನ ಏರಿ ಕೈ ಬಿಟ್ಟಂತೆ ಆಗುತ್ತದೆ. ಇಹಕ್ಕೆ ದೂರ ಅಂದರೆ ಸ್ವಧರ್ಮವನ್ನು ಬಿಟ್ಟವನನ್ನು ಸಮಾಜ ಬಾಂಧವರು ದೂರವಿಡುವರು; ಪರಕ್ಕೆ ದೂರ ಅಂದರೆ ಲಿಂಗದೇವನು ದೂರವಿಡುವನು. ಏಕೆಂದರೆ ಜಂಗಮನು ಲಿಂಗದೇವನ ಸಾಕಾರ ಮುಖವಾದ ಕಾರಣ ಅವನು ಬೋಧಿಸುವ ಪಥದಲ್ಲೇ ಮುನ್ನಡೆಯಬೇಕು.

ಕೆಲವೊಮ್ಮೆ ಇಂಥ ನಿರ್ಬಂಧವು ಮತಾಂಧತೆ ಎನಿಸುವುದಾದರೂ ತನ್ನ ಧರ್ಮವನ್ನು ರಕ್ಷಿಸಲು ಇದು ಅತ್ಯಗತ್ಯ. ಲಿಂಗಾಯತರು ಗೃಹಪ್ರವೇಶದಂತಹ ಪವಿತ್ರ ಸಮಾರಂಭದಲ್ಲಿ ತಮ್ಮ ಧರ್ಮಕ್ಕೆ ವಿರುದ್ಧವಾಗಿ ಹೋಮ ಮಾಡಿಸುವುದು, ಮೂಢ ಲಿಂಗಾಯತರು ಹರಸಿಕೊಂಡು ದೇವಿಗೆ ಕುರಿ, ಕೋಳಿ ಬಲಿ ಕೊಡುವುದು, ಕೆಲವು ಪಂಥಗಳ ಪ್ರಭಾವಕ್ಕೆ ಒಳಗಾಗಿ ಇಷ್ಟಲಿಂಗ ಧಾರಣೆ ತೊರೆಯುವುದು ಮುಂತಾಗಿ ನೋಡಿದಾಗ ಸ್ವಧರ್ಮಕ್ಕೆ ವಿರುದ್ಧವಾಗಿ ಹೋಗಬಾರದೆಂದು ನಿರ್ಬಂಧಿಸುವುದು ಅವಶ್ಯವೆನಿಸುತ್ತದೆ.

429. ಸಮಯೋಚಿತ ದಾಸೋಹ

ಜಂಗಮವಿಲ್ಲದ ಮಾಟ ಕಂಗಳಿಲ್ಲದ ನೋಟ,
ಹಿಂಗಿತ್ತು ಶಿವಲೋಕ ಇನ್ನೆಲ್ಲಿಯದಯ್ಯಾ ?
ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ
ಸಮಯೋಚಿತವನರಿಯದೆ ಉದರವ ಹೊರೆವವರ
ನರಕದಲ್ಲಿಕ್ಕದೆ ಮಾಣ್ಬನೆ ಲಿಂಗದೇವಾ ? – ಬ.ವ.ದೀ. 427

ಯಾವುದೇ ಪವಿತ್ರ ಕಾರ್ಯ ಮಾಡಲಿ ಜಂಗಮದ ಸನ್ನಿಧಿ ಅತ್ಯಗತ್ಯ. ಅದಿಲ್ಲದೆ ಮಾಡುವ ಕೆಲಸ ಕಾರ್ಯ ಕಣ್ಣುಗಳಿಲ್ಲದೆ ನೋಡುವ ನೋಟದಂತೆ! ಇಂಥ ಕಾರ್ಯಕ್ಕೆ ಇಂಥ ಜನರಿಗೆ ಲಿಂಗದೇವನೊಲುಮೆ ಲಭ್ಯವಾಗದು. ದೇವರ ನೈವೇದ್ಯಕ್ಕೆಂದು ಮೀಸಲಾಗಿಟ್ಟ ಅಡುಗೆಯನ್ನು ಆಸೆಯನ್ನು ತಾಳಲಾರದೆ ಸಿಂಬಕ ಅರ್ಥಾತ್ ಸೇವಕ ತಿಂದು ಬಿಟ್ಟರೆ ಹೇಗೋ ಹಾಗೆ ಜಂಗಮಕ್ಕೆ ಸಲ್ಲಿಸದೆ ಮಾಡುವ ಕಾರ್ಯ. ಸಮಯೋಚಿತವನರಿದು ಜಂಗಮ ದಾಸೋಹ ಮಾಡಬೇಕು. ಹಾಗೆ ಮಾಡದೆ ತಾನು ಗಳಿಸಿದ್ದೆಲ್ಲವನ್ನು ತಾನೇ ಬಳಸಿದರೆ ಅಂಥ ಸ್ವಾರ್ಥಿಯನ್ನು ದೇವನು ನರಕಯಾತನೆಗೆ ಒಳಪಡಿಸುವನು.

ಬೆಂಗಳೂರಿನಂತಹ ಪಟ್ಟಣದಲ್ಲಿ ಜಂಗಮರು ಸಿಗುವುದು ದುರ್ಲಭವಿರುವಾಗ ಬಸವ ಜ್ಯೋತಿಯನ್ನು ಏರ್ಪಡಿಸಿ ಸಹ ಶರಣ ಬಂಧುಗಳನ್ನು ಕರೆದು ಪೂಜೆ, ದಾಸೋಹ ಮಾಡಬೇಕು. ತನ್ನ ಗಳಿಕೆಯ ಒಂದು ಪಾಲನ್ನು ಮಾನವೀಯ, ಸಾಮಾಜಿಕ ಕಾರ್ಯಗಳಿಗೂ ಬಳಸಬೇಕು.

430. ಜಂಗಮ ಮುಖದಲ್ಲಿ ದೇವನು ಉಣ್ಣುವನು

ಲಿಂಗದಲ್ಲಿ ದಿಟವನರಸುವಡೆ ಜಂಗಮವ ನೆರೆನಂಬುವುದು
ನಡೆಲಿಂಗ, ನುಡಿಲಿಂಗ, ಮುಖಲಿಂಗವೆಂದೆ ನಂಬೊ!
ಯತ್ರ ಮಾಹೇಶ್ವರಸ್ತತ್ರ ಸನ್ನಿಹಿತ ನಾಗಿ
ಅಧರ ತಾಗಿದ ರುಚಿಯನುದರ ತಾಗಿದ ಸುಖವ
ಉಂಬ ಉಡುವ ಲಿಂಗದೇವ ಜಂಗಮಮುಖದಲ್ಲಿ. – ಬ.ವ.ದೀ. 428

ಲಿಂಗದೇವನ ಕೃಪೆಗೆ ಪಾತ್ರರಾಗಬೇಕೆಂದಿದ್ದರೆ ಜಂಗಮದಲ್ಲಿ ದೃಢ ವಿಶ್ವಾಸವನ್ನು ಇಡಬೇಕು. ಏಕೆಂದರೆ ಜಂಗಮ ನಡೆದಾಡುವ ದೇವರು. ನುಡಿಯುವ, ಬೋಧಿಸುವ ಮಾರ್ಗದರ್ಶನ ಮಾಡುವ ದೇವರು. ಲಿಂಗದೇವನು ಭಕ್ತನಿಗೆ ಮಾರ್ಗದರ್ಶನ ಮಾಡಲು ಅಸಾಧ್ಯ, ಜಂಗಮನ ಮೂಲಕ

(ಮುಖಲಿಂಗ) ಮಾರ್ಗದರ್ಶನ ಮಾಡುವನು. ನಾಲಿಗೆಗೆ ತಾಗುವ ರುಚಿ, ಉದರಕ್ಕೆ ತಾಗುವ ಸುಖ ದೇವನಿಗೆ ಸಮರ್ಪಿತವಾಗುವುದು. ಲಿಂಗದೇವನು ಜಂಗಮದ ಮೂಲಕ ಉಣ್ಣುವನು ಮತ್ತು ಉಡುವನು.

ಇಲ್ಲಿ ಸಹ ಜಂಗಮ ಎಂಬರೆ ತ್ಯಾಗಿ, ಯೋಗಿ, ಧರ್ಮ ಬೋಧಕ ಎಂದು ಅರ್ಥ ಮಾಡುವುದಲ್ಲದೆ ಒಡಲೊಳಗಣ ಚೈತನ್ಯವೇ ಜಂಗಮ. ಹಸಿದವನಿಗೆ ಉಣ್ಣಲಿಕ್ಕಿದಾಗ, ಬಾಯಾರಿದವನಿಗೆ ನೀರುಕೊಟ್ಟಾಗ, ಬಡಬಗ್ಗರಿಗೆ ಉಡಲು ಕೊಟ್ಟಾಗ ಲಿಂಗದೇವನಿಗೆ ತೃಪ್ತಿಯುಂಟಾಗುವುದು.

431. ಭಕ್ತ - ಜಂಗಮ ಸಂಬಂಧ

ಜಂಗಮದ ಮನ, ಭಾವದಲ್ಲಿ ಭಕ್ತನೆ ಭೃತ್ಯನೆಂದು,
ಭಕ್ತನ ಮನ-ಭಾವದಲ್ಲಿ ಜಂಗಮವೆ ಕರ್ತನೆಂದು ಇದ್ದ ಬಳಿಕ
ಬಂದುದು ಬಾರದು ಇದ್ದುದು
ಹೋಯಿತ್ತೆಂಬ ಗುಣವುಳ್ಳನ್ನಕ್ಕ
ನಿಮಗೆ ದೂರ, ನಿಮ್ಮವರಿಗೆ ಮುನ್ನವೇ ದೂರ!
ಶಿವಾಚಾರಕ್ಕಲ್ಲಿಂದತ್ತ ದೂರ
ಜಂಗಮದ ಹರಿದ ಹರಿವು, ಜಂಗಮದ ನಿಂದ ನಿಲವು,
ಜಂಗಮದ ಗಳಗರ್ಜನೆ, ಜಂಗಮದ ಕೋಳಾಟಕ್ಕೆ ಸೈರಿಸದಿದ್ದಡೆ
ನೀನಂದೆ ಮೂಗ ಕೊಯ್ಯಿ, ಲಿಂಗದೇವಾ. - ಬ.ವ.ದೀ. 429

ಭಕ್ತ-ಜಂಗಮ ಸಂಬಂಧ ಆತ್ಮೀಯ ಸಂಬಂಧ. ಜಂಗಮನಿಗೆ ಭಕ್ತರು ತಮ್ಮ ಮಕ್ಕಳಂತೆ ಆತ್ಮೀಯರು ಎಂಬ ಭಾವ, ಸುಖ ದುಃಖಗಳಲ್ಲಿ ಪಾಲುದಾರಿಕೆ ಇದ್ದರೆ; ಭಕ್ತನಿಗೆ ಜಂಗಮವೇ ತನ್ನ ಒಡೆಯ, ಹಿತೈಷಿ, ಮಾರ್ಗದರ್ಶಕ, ಸುಖ-ದುಃಖಗಳಲ್ಲಿ ಪಾಲುಗಾರ ಎಂಬ ನಂಬಿಕೆ ಇರಬೇಕು. ಅವರಿಂದ ವ್ಯಾವಹಾರಿಕ ಲಾಭವನ್ನು ನಿರೀಕ್ಷಿಸಬಾರದು. ಮತ್ತು ಮನೆಗೆ ಬಂದಾಗ ಉಪಚಾರ ಮಾಡುವಾಗ ಅಯ್ಯೋ ಹಣ ಖರ್ಚಾಗುತ್ತಿದೆಯಲ್ಲ ಎಂಬ ಭಾವ ಸುಳಿಯಬಾರದು. ಹಾಗೆ ಭಾವಿಸುವವನು ಲಿಂಗದೇವನಿಗೆ ದೂರವಾಗುತ್ತಾನೆ, ಸಮಾಜಕ್ಕೂ ದೂರವಾಗುತ್ತಾನೆ. ಏಕೆಂದರೆ ಆ ಭಾವವು ಶಿವಾಚಾರ ಅಂದರೆ ಸಾಮಾಜಿಕ ಸಮಾನತಾ ತತ್ವಕ್ಕೆ ವಿರೋಧವಾದುದೇ ಸರಿ!

ಇಲ್ಲಿಯವರೆಗೆ ಹೇಳಿದುದೆಲ್ಲ ಯುಕ್ತವಾಗಿದೆ. ನಿಜವಾದ ಜಂಗಮ ಬಡ ಭಕ್ತರು ಮತ್ತು ಶ್ರೀಮಂತ ಭಕ್ತರು ಉಭಯತರಿಗೂ ಹೊಂದಿಕೊಳ್ಳುವನು. ಶ್ರೀಮಂತರ ಮನೆಯ ಮೃಷ್ಟಾನ್ನ ಉಂಡು ಹರ್ಷಿಸುವಂತೆ ಬಡವರ ಮನೆಯ ಅಂಬಲಿ ಕುಡಿದೂ ಸಂತೋಷಿಸುವನು. ಬಿನ್ನಹಕ್ಕೆ ಕರೆದಾಗ ಉಭಯತರ ಮನೆಗೂ ಸಮಚಿತ್ತದಿಂದ ನಿಜ ಜಂಗಮನು ಹೋಗುವನು ಆದರೆ ಮುಂದಿನ 3 ವಾಕ್ಯಗಳು - ಜಂಗಮದ ಹರಿದ ಹರಿವು, ಜಂಗಮದ ನಿಂದ ನಿಲುವು। ಜಂಗಮದ ಗಳ ಗರ್ಜನೆ, ಜಂಗಮದ ಕೋಳಾಟಕ್ಕೆ ಸೈರಿಸದಿದ್ದಡೆ ನೀನಂದೆ ಮೂಗ ಕೊಯ್ಯಿ ಲಿಂಗದೇವಾ!

ಜಂಗಮದ ಕೋಪ, ಗಳ (ಗಂಟಲು) ಗರ್ಜನೆ ಮುಂತಾದುವನ್ನು ಭಕ್ತನು ಸೈರಿಸಬೇಕು ಎಂಬ ಮಾತುಗಳು ಇವನ್ನು ಧರ್ಮಪಿತ ಬಸವಣ್ಣನವರು ಹೇಳಿರಲು ಸಾಧ್ಯವೆ? ಎಂಬ ಸಂದೇಹ ಹುಟ್ಟಿಸುತ್ತೇವೆ. ಏಕೆಂದರೆ ಜಂಗಮನದು ಶಾಂತ, ಗಂಭೀರ, ಪ್ರೌಢ ವ್ಯಕ್ತಿತ್ವ. ಅವನು ಭಕ್ತರ ಮೇಲೆ ಆಟಾಟೋಪವನ್ನು ಪ್ರದರ್ಶಿಸುವುದುಂಟೆ? ಇಂಥ ಕೋಪಿಷ್ಠ ಜಂಗಮರನ್ನು ಭಕ್ತನು ಸೈರಿಸಿಕೊಳ್ಳುವುದು ಅಗತ್ಯವಿದೆಯೆ? ಊಟೋಪಚಾರಗಳನ್ನು ನೆಪವಾಗಿಟ್ಟುಕೊಂಡು ಜಂಗಮ ಹಾರಾಡಿದರೆ ಅದು ಅವನ ವ್ಯಕ್ತಿತ್ವಕ್ಕೇ ಕುಂದು. ಆದ್ದರಿಂದ ಈ ಮೂರು ವಾಕ್ಯಗಳು ಧೂರ್ತರಾರೋ ಬರೆದು ಸೇರಿಸಿರಬಹುದು ಎಂಬ ಸಂದೇಹ ಉಂಟು ಮಾಡುತ್ತವೆ.

432. ಸಮೂಹ ಜೀವನ

ನಯನದಾಹಾರವ ಜಂಗಮವ ನೋಡಿಸುವೆನು
ಶ್ರೋತ್ರದಾಹಾರವ ಜಂಗಮವ ಕೇಳಿಸುವೆನು
ಘ್ರಾಣದಾಹಾರವ ಜಂಗಮವ ವಾಸಿಸುವೆನು
ಜಿಹ್ವೆಯಾಹಾರವ ಜಂಗಮವನೂಡಿಸುವೆನು
ಕವಚದಾಹಾರವ ಜಂಗಮಕ್ಕೆ ಹೊದ್ದಿಸುವೆನು
ಅಧಿಕ ಪ್ರೇಮ ಪ್ರಣಾಮವ ಮಾಡುವೆನು
ಸಕಲ ಪದಾರ್ಥಂಗಳ ನೀಡುವೆನು
ಲಿಂಗದೇವಾ ನಿಮ್ಮ ಶರಣರಿಗೆ. - ಬ.ವ.ದೀ. 430

ಕಣ್ಣುಗಳಿಗೆ ಆಹಾರವಾದ ಉತ್ತಮ ದೃಶ್ಯಾವಳಿಗಳನ್ನು ಎಲ್ಲರೊಡನೆ ನೋಡುವೆ. ನಾಟಕ, ನೃತ್ಯ, ಬಹುರೂಪ ಮುಂತಾದವು ಕಣ್ಣಿನ ಆಹಾರ. ಅವುಗಳನ್ನು ವ್ಯಕ್ತಿ ತಾನೊಬ್ಬನೇ ನೋಡಿ, ಆನಂದಿಸದೆ ಶರಣರೊಡನೆ ನೋಡಿ ಆನಂದಿಸಬೇಕು. ಕಿವಿಗೆ ಆಹಾರವಾದ ಸಂಗೀತ, ಪ್ರವಚನ, ಅನುಭವ ಗೋಷ್ಠಿ ಮುಂತಾದವನ್ನು ಶರಣರೊಡಗೂಡಿ ಕೇಳಿ ಆನಂದಿಸಬೇಕು. ಘ್ರಾಣ ಅಂದರೆ ಮೂಗಿಗೆ ಆಹಾರವಾಗುವ ಸುವಾಸನೆಯನ್ನು ಶರಣರೊಡನೆ ಹಂಚಿಕೊಳ್ಳಬೇಕು. ನಾಲಿಗೆಗೆ ಆಹಾರವಾಗುವ ಭಕ್ಷ್ಯ, ಭೋಜ್ಯಗಳನ್ನು ತಾನಷ್ಟೆ ಉಣ್ಣದೆ ಶರಣರ ಪಂಕ್ತಿಯಲ್ಲಿ ಕುಳಿತು ಹಂಚಿಕೊಂಡು ಉಂಡು ಆನಂದಿಸಬೇಕು. ಇದೆಲ್ಲವನ್ನು ದಾನ ಮಾಡುತ್ತಿದ್ದೇನೆ ಎಂಬ ಹಮ್ಮಿನಿಂದ ಮಾಡದೆ ದಾಸೋಹಭಾವದಿಂದ "ದೇವಾ, ಇವರೆಲ್ಲ ನನಗೆ ಸೇವೆ ಮಾಡುವ ಅವಕಾಶವನ್ನು ಒದಗಿಸುತ್ತಿದ್ದಾರೆ. ದಕ್ಕಾಗಿ ನಾನು ಕೃತಜ್ಞನು. ಎಂದು ಅಧಿಕ ಪ್ರೇಮದಿಂದ ಪ್ರಣಾಮವ ಮಾಡುವೆನು. ನಾನು ಬಳಸುವ ಎಲ್ಲ ವಸ್ತುಗಳನ್ನು ಲಿಂಗದೇವಾ ನಿಮ್ಮ ಶರಣರಿಗೆ ನೀಡಿ ನಾನು ಉಪಯೋಗಿಸುವೆನು" ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು.

ದಾನ ಬೇರೆ ದಾಸೋಹ ಬೇರೆ. ಉಳ್ಳವನು ಇಲ್ಲದವನಿಗೆ ಕೊಡುವುದು ದಾನ. ಕರ್ತವ್ಯವೆಂದು ಉಳ್ಳವರು ಹಂಚುವುದು ದಾಸೋಹ. ದಾನ ಕೊಡುವವನಲ್ಲಿ ಹಮ್ಮಿದ್ದರೆ ದಾಸೋಹಂಭಾವಿಯಲ್ಲಿ ವಿನಯವಿರುತ್ತದೆ. ದಾನದಲ್ಲಿ ಕೊಡುವವನು ಪಡೆದುಕೊಳ್ಳುವವನಿಗೆ ಉಪಕಾರ ಮಾಡುತ್ತಿದ್ದೇನೆಂಬ ಭಾವವಿದ್ದರೆ, ಪಡೆದುಕೊಳ್ಳುವವನಿಗೆ ಉಪಕಾರ ಮಾಡುತ್ತಿದ್ದೇನೆಂಬ ಭಾವವಿದ್ದರೆ, ದಾಸೋಹದಲ್ಲಿ ಪಡೆದುಕೊಳ್ಳುವವನು ಎಂಥಾ ಅವಕಾಶವನ್ನು ಕಲ್ಪಿಸಿಕೊಟ್ಟ ಎಂಬ ಕೃತಜ್ಞತೆ ಇರುತ್ತದೆ. ಆದಕ್ಕಾಗಿ ಎಲ್ಲರಿಗೂ ಅಥವಾ ಗುರು ಜಂಗಮರಿಗೆ ಪ್ರಸಾದವನ್ನು ಎಡೆ ಮಾಡಿದ ಮೇಲೆ ದಾಸೋಹಿಯು ಸಾಷ್ಟಾಂಗ ಹಾಕಿ ಶರಣು ಸಲ್ಲಿಸುವನು. ಮೇಲ್ಕಂಡ ವಚನ ಅಮೂಲ್ಯ ಸಂದೇಶವನ್ನು ನೀಡುತ್ತದೆ. ವ್ಯಕ್ತಿಯು ತಾನಷ್ಟೇ ಸುಖವಾಗಿ ತಿಂದುಂಡು ಉಟ್ಟು ತೊಟ್ಟು ಸುಖವಾಗಿದ್ದರೆ ಸಾಲದು, ಇತರರೊಡನೆ ಸಂಪತ್ತನ್ನು ಹಂಚಿಕೊಂಡು ಅನುಭವಿಸಬೇಕು ಎಂಬ ಸಂದೇಶ ಸಾರುತ್ತದೆ.

433. ಬೇಡಿದೊಡೀವೆನು

ಎಂಬತ್ತು ನಾಲ್ಕು ಲಕ್ಷ ಮುಖದೊಳಗೊಂದೆ ಮುಖವಾಗಿ
ಕಾಡಿ ನೊಡೆನ್ನನು, ಬೇಡಿ ನೋಡೆನ್ನನು,
ಬೇಡದಿದ್ದಡೆ, ಅಯ್ಯಾ ನಿಮಗೆ ಪ್ರಮಥರಾಣೆ
ನೀನಾವ ಮುಖದಲ್ಲಿ ಬಂದು ಬೇಡಿದೊಡೀವೆನು, ಲಿಂಗದೇವಾ.
- ಬ.ವ.ದೀ. 431

ಗುರು ಬಸವಣ್ಣನವರು ಮಹಾಮನೆ ಕಟ್ಟಿದರು. ಒಂದು ನೂತನ ಪರಿಕಲ್ಪನೆಯನ್ನು

ಪ್ರಯೋಗಕ್ಕೆ ತಂದರು. ಶರಣರೆಲ್ಲ ಅದರ ಸದಸ್ಯರು. ಅವರು ದುಡಿದುದರಲ್ಲಿ ತಮ್ಮ ಅಗತ್ಯವಿದ್ದಷ್ಟು ಬಳಸಿಕೊಂಡು ಹೆಚ್ಚುವರಿಯಾದುದನ್ನು ಮಹಾಮನೆಯ ಅಕ್ಷಯ ನಿಧಿಗೆ ಹಾಕುವರು. ತಮಗೇನಾದರೂ ಆವಶ್ಯಕತೆ ಬಿದ್ದಲ್ಲಿ ಆ ಅಕ್ಷಯ ನಿಧಿಯಿಂದ ಪಡೆಯುವರು. ಹೀಗಾಗಿ ಶರಣರಿಗೆ ನಾಳೆಗೆ ಎಂತು? ಎಂಬ ಚಿಂತೆ ಇರಲಿಲ್ಲ. ಇಂಥ ನಿಧಿಯ ಕಲ್ಪನೆ ಇಲ್ಲದ ಸಾಮಾನ್ಯರು ಬಂದು ತಮಗೆ ಅದು ಬೇಕು, ಇದು ಬೇಕು ಎಂದು ಕಾಡಿ ಕಾಡಿ ಕೇಳುತ್ತಿದ್ದರು, ಇಲ್ಲವೇ ಬೇಡುತ್ತಿದ್ದರು. ಅಂಥವರಿಗೆ ಮನ ತುಂಬಿ ಕೊಡಲು ಧರ್ಮಪಿತ ಬಸವಣ್ಣನವರು ಸದಾ ಉತ್ಸಕರಾಗಿರುತ್ತಿದ್ದರು. ಯಾರೋ ದರಿದ್ರ ಬಂದು ಬೇಡುತ್ತಿದ್ದಾರೆ ಎಂದು ಅವರ ಬಗ್ಗೆ ತಿರಸ್ಕಾರ ಭಾವ ತಾಳದೆ ಲಿಂಗದೇವನೇ ಅವರ ಮೂಲಕ ಬೇಡುತ್ತಿದ್ದಾನೆ ಎಂದು ಹರ್ಷಿಸುತ್ತಿದ್ದರು.

434. ಕಾಡಿಸಲು, ಬೇಡಿಸಲು ಮೊರೆ

ಕಂದಿದೆನಯ್ಯ ಎನ್ನ ನೋಡುವವರಿಲ್ಲದೆ
ಕುಂದಿದೆನಯ್ಯ ಎನ್ನ ನುಡಿಸುವವರಿಲ್ಲದೆ;
ಬಡವಾದೆನಯ್ಯಾ ಎನ್ನ ತನು ಮನ ಧನವ ಬೇಡುವವರಿಲ್ಲದೆ,
ಕಾಡುವ ಬೇಡುವ ಶರಣರ ತಂದು
ಕಾಡಿಸು, ಬೇಡಿಸು, ಲಿಂಗದೇವಾ

- ಬ.ವ.ದೀ. 432

ಶರಣರ ಬರುವಿಗಾಗಿ ಬಸವಣ್ಣವನವರ ಹೃದಯ ಸದಾ ಹಂಬಲಿಸುತ್ತಿತ್ತು. ತಮ್ಮನ್ನು ನೋಡುವವರು ಅರ್ಥಾತ್ ಆದರಿಸುವವರು ಇಲ್ಲವೆಂದು ಕಂದಿ ಅಂದರೆ ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದರು. ತಮ್ಮನ್ನು ಮಾತನಾಡಿಸುವವರು, ತಮ್ಮೊಡನೆ ಧರ್ಮ ತತ್ವಗಳನ್ನು ಚಿಂತನೆ ಮಾಡುವವರು ಯಾರೂ ಇಲ್ಲ ಎಂದು ಕುಂದಿ ಹೋಗುತ್ತಿದ್ದರು. ತನು ಮನ ಧನಗಳನ್ನಿತ್ತು ಸೇವೆ ಮಾಡಲು ತುದಿಗಾಲ ಮೇಲೆ ನಿಂತಿರುತ್ತಿದ್ದರು. ಹಾಗೆ ಬೇಡುವವವರು ಇಲ್ಲದಾಗ ತಮ್ಮ ತನು ಮನ ಧನ ವ್ಯರ್ಥವಾಗುತ್ತಿವೆಯಲ್ಲ ಎಂದು ಹಲುಬುತ್ತಿದ್ದರು. ಕಾಡುವ, ಬೇಡುವ ಶರಣರ ತಂದು ಕಾಡಿಸು, ಬೇಡಿಸು ಎಂದು ಲಿಂಗದೇವನಲ್ಲಿ ಬೇಡುತ್ತಾರೆ.

ಕೆಲವು ಬಡವರಾದ ಸಮಾಜ ಬಾಂಧವರು ಶ್ರೀಮಂತರಾದ ಸಹ ಧರ್ಮೀಯರ ಬಳಿಗೆ ಬಂದು ತಮ್ಮ ಅಗತ್ಯವನ್ನು ತಿಳಿಸುತ್ತ ಪರಿಪರಿಯಾಗಿ ದಾನ ನೀಡಲು ಬೇಡಿಕೊಳ್ಳುತ್ತಾರೆ, ಕಾಡುತ್ತಾರೆ. ಆಗ ಕಟು ಹೃದಯದವರು ನಿರಾಕರಿಸಿ, ಸೇವಕರ ಮೂಲಕ ದಬ್ಬಿಸುತ್ತಾರೆ. ಹಾಗೆ ಮಾಡದೆ ತನ್ನ ಆದಾಯದ ಒಂದು ಪಾಲನ್ನು ತೆಗೆದಿರಿಸಿ ಕೈಲಾದಷ್ಟು ದಾನ ಮಾಡಬೇಕು. ತನು ಸೇವೆಯ ಅಗತ್ಯವಿರುವವರಿಗೆ ತನುವಿನಿಂದ ಸೇವೆ ಮಾಡಬೇಕು; ಮನದ ಸಾಂತ್ವನ ಬೇಕಾದವರಿಗೆ ಮನದಿಂದ ಆದರಿಸಬೇಕು; ಧನದ ಅಗತ್ಯವಿರಿರುವವರಿಗೆ ಧನವನ್ನು ನೀಡಬೇಕು. ಇದೇ ನಿಜ ಧರ್ಮ.

(ಮುಂದುವರಿಯುವುದು......)

2010ರ ಅಕ್ಟೋಬರ್ 20,21,22 ರಂದು ಕಲ್ಯಾಣ ಪರ್ವ

ಬೀದರ ಜಿಲ್ಲೆಯ ಶರಣ ಭೂಮಿ ಬಸವ ಕಲ್ಯಾಣದಲ್ಲಿ 2002ರಿಂದಲೂ ಪ್ರತಿ ವರ್ಷವೂ ಕಲ್ಯಾಣ ಪರ್ವ ಎಂಬ ಉತ್ಸವವು ನಡೆಯುತ್ತಿದೆಯಷ್ಟೆ. 9ನೆಯ ಕಲ್ಯಾಣ ಪರ್ವ 2010ರ ಅಕ್ಟೋಬರ್ 20,21,22 ರಂದು ಜರುಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಬಸವ ಕಲ್ಯಾಣದ ಕಲ್ಯಾಣ ಪರ್ವ ಧಾರ್ಮಿಕ ಉತ್ಸವದಲ್ಲಿ ಭಾಗಿಯಾಗುವುದೇ ಅಲ್ಲದೆ ಉದಾರವಾಗಿ ಕಾಣಿಕೆಯನ್ನು ನೀಡಬೇಕೆಂದು, ಸಂಗ್ರಹಿಸಿಕೊಡಬೇಕೆಂದು ಕೋರುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಹಾಮನೆ, ಮುಖ್ಯರಸ್ತೆ, ಬಸವ ಕಲ್ಯಾಣ

ಅಪ್ಪಾಜಿಯವರ ಜೀವನದ ಸಾರ್ಥಕತೆ

- ಪೂಜ್ಯ ಶ್ರೀ ಬಸವ ಪ್ರಭು ಸ್ವಾಮೀಜಿ, ಬ.ಕಲ್ಯಾಣ

ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂ|| ಲಿಂಗಾನಂದ ಅಪ್ಪಾಜಿಯವರನ್ನು ಎಂದೂ ನಾ ನೋಡಿಲ್ಲವಾದರೂ ಅವರ ಮಾತುಗಳನ್ನು, ಅವರ ಚಿತ್ಕಳಾ ಸ್ವರೂಪವನ್ನು ಸಿ.ಡಿ.ಕ್ಯಾಸೆಟ್‌ಗಳ ಮೂಲಕ ಕೇಳಿ ನೋಡಿ ಆನಂದಿಸಿದ್ದೇನೆ. ಅವರ ನಡೆ-ನುಡಿ ಗಾಂಭೀರ್ಯ, ಅಸ್ಖಲಿತವಾಣಿ, ದೇಹದಾರ್ಢ್ಯತೆ, ದೈವಿ ಚಿತ್ಕಳೆ ನನ್ನನ್ನು ಮಂತ್ರ ಮುಗ್ಧನನ್ನಾಗಿ ಮಾಡಿದ್ದು ಕನಸಿನಲ್ಲಿ. ಆ ಕನಸು ನನ್ನನ್ನು ಆಧ್ಯಾತ್ಮ ಆನಂದದಲ್ಲಿ ಮುಳುಗಿಸಿದ್ದು ನನ್ನನ್ನು ಅತ್ಯಂತ ಹರ್ಷಿತನನ್ನಾಗಿ ಮಾಡಿದೆ. ಜಾಗ್ರತದಲ್ಲಿ ನೋಡಲಾರದ ಕೊರತೆಯನ್ನು ಸ್ವಪ್ನದಲ್ಲಿ ಕಂಡು ಆನಂದ ತುಂದಿಲನಾಗಿದ್ದೇನೆ. ಅಪ್ಪಾಜಿಯವರ ನಿಜ ಜೀವನದ ಆದರ್ಶದ ಸಾರ್ಥಕ ಜೀವನದ ಬಗೆಗೆ. ಕೆಲವೊಂದಿಷ್ಟು ಅನಿಸಿಕೆಗಳು.

ಈ ಪ್ರಪಂಚದಲ್ಲಿ ಯಾವುದಕ್ಕೆ ಹುಟ್ಟು- ಸಾವು ಇದೆಯೋ ಅವುಗಳಿಗೆಲ್ಲಾ ಜೀವನವಿದೆ. ಹುಟ್ಟು -ಸಾವುಗಳ ನಡುವಿನ ಸಾರ್ಥಕತೆಯನ್ನು ತುಂಬುವಂತಹುದೇ ಜೀವನ. ಜೀವದೊಡನೆ ಅಂಟಿಕೊಂಡು ಬರುವ ಜೀವನವು ವ್ಯಕ್ತಿಯಿಂದ ವ್ಯಕ್ತಿಗೆ ಆತನ ಅನುಭವಕ್ಕನುಸಾರವಾಗಿ ವಿವಿಧಾರ್ಥ ಪಡೆಯುತ್ತಾ ಹೋಗುತ್ತದೆ.

"ಹುಟ್ಟು ಸಾವುಗಳೆಂಬ ಎರಡು ನಿಲ್ದಾಣಗಳ
ನಡುವಿನ ಜೀವನದ ಸೇವೆಯಿಂ. ಸಾರ್ಥೈಸು." ಎಂಬ ಪೂಜ್ಯ ಮಾತಾಜಿಯವರ ವಾಣಿಯಂತೆ, ಜೀವನವು ಸುಂದರವಾಗಿ ಸಾಗಬೇಕಾಗುತ್ತದೆ.

ಒಬ್ಬ ಸಾಹಿತಿಯ ಜೀವನಕ್ಕೂ
ಒಬ್ಬ ವಿಜ್ಞಾನಿಯ ಜೀವನಕ್ಕೂ
ಒಬ್ಬ ಅನುಭಾವಿಯ ಜೀವನಕ್ಕೂ
ಒಬ್ಬ ಮಹಾತ್ಮನ ಜೀವನಕ್ಕೂ ಬಹಳ ವ್ಯತ್ಯಾಸವಿದೆ.
ಒಬ್ಬ ಬಡವನ ಜೀವನದ ರೀತಿ ಶ್ರೀಮಂತನ ಜೀವನದ ರೀತಿಗಿಂತ ಭಿನ್ನವಾದದು.

ಒಂದು ಮಾವಿನ ಮರದಲ್ಲಿ ತಳೆದಿರುವಂತಹ ಹಣ್ಣಿನ ಬಗ್ಗೆ ಅವರವರ ದೃಷ್ಟಿಯನ್ನು ನೋಡೋಣ. ಸಾಹಿತಿಯಾದವನು ಹಣ್ಣಿನ ಗಾತ್ರ, ವರ್ಣ ಅದರ ವಿನ್ಯಾಸವನ್ನು ಹಾಗೂ ರುಚಿಯನ್ನು ಹೊಗಳಿ ಸಾಹಿತ್ಯಿಕ ರೂಪದಲ್ಲಿ ಬರೆದಿಡುತ್ತಾನೆ. ಒಬ್ಬ ವಿಜ್ಞಾನಿಯಾದವನು ಆ ಮಾವಿನ ಮರ ಯಾವ ರೀತಿ ಬೆಳೆದುಕೊಂಡು ಬಂತು. ಅದು ಎಷ್ಟು ಪ್ರಮಾಣದಲ್ಲಿ ನೀರನ್ನು ಹೀರಿಕೊಳ್ಳುತ್ತದೆ. ಯಾವ ರಾಸಾಯನಿಕ ಗೊಬ್ಬರ ಹಾಕಿದರೆ ಎಷ್ಟು ಫಲಕೊಡುತ್ತ, ಆ ಹಣ್ಣಿನಲ್ಲಿರುವ ಹುಳಿ, ರುಚಿ, ಸಿಹಿ ಯಾವ ಹಂತದಲ್ಲಿ ಬದಲಾವಣೆಯಾಗುತ್ತೆ ಎಂದು ಪ್ರಯೋಗ ಶಾಲೆಯಲ್ಲಿ ಪರೀಕ್ಷಿಸುವನು. ಒಬ್ಬ ಅನುಭಾವಿ ಆ ಮಾವಿನ ಮರದಲ್ಲಿ ತಳೆದಿರುವ ಹಣ್ಣನ್ನು ನೋಡಿ ಮೇಲೆ ಹತ್ತಿ ಕಿತ್ತು ತಿನ್ನುವನು ಅದರ ರುಚಿಯನ್ನು ತಾನೊಬ್ಬನೆ ಅನುಭವಿಸುವನು. ಒಬ್ಬ ದಾರ್ಶನಿಕ ಆ ಮಾವಿನ ಮರದಲ್ಲಿ ತಳೆದಿರುವ ಹಣ್ಣನ್ನು ನೋಡಿ ತಿಂದು ಮತ್ತು ಆ ರುಚಿಯನ್ನು ಇನ್ನೊಬ್ಬರಿಗೆ ತಿಳಿಸುವದಲ್ಲದೆ, ಹಣ್ಣನ್ನೂ ಕಿತ್ತುಕೊಡುವನು. ಎಲ್ಲರಿಗೂ ತಿನಬಡಿಸುವನು. ಹಾಗೆಯೇ ಸಾಹಿತಿಯಾದವನು ಜೀವನದ ಬಗೆಯನ್ನು ವಿವರಿಸುವನು ಮಾತ್ರ. ವಿಜ್ಞಾನಿಯಾದವನು ಜೀವನದ ಹುಟ್ಟ ಬಗೆಯನ್ನು ಸಂಶೋಧಿಸುವನು. ಅನುಭಾವಿಯಾದವನು ತನ್ನ ಜೀವನವನ್ನು, ಶಾಂತವಾಗಿ ಏಕಾಂಗಿಯಾಗಿರಿಸಿ ಆಧ್ಯಾತ್ಮ ಪಥದಲ್ಲಿ ತಾನೊಬ್ಬನೆ ಆನಂದವನ್ನು ಅನುಭವಿಸುವವನು. ಇತರರಿಗೆ ಕೊಡಲಾರನು. ಹಾಗೆಯೆ ಇಲ್ಲಿ

ದಾರ್ಶನಿಕನಾದವನು ಜೀವನದ ಬಗೆಯನ್ನು ಅರಿತು ಅದರ ಹುಟ್ಟು-ಸಾವುಗಳ ಮರ್ಮವನ್ನು ತಿಳಿದು ತಾನು ಸಾರ್ಥಕಪಡಿಸಿಕೊಂಡು ಇತರರಿಗೆ ಸಾರ್ಥಕ ಪಥವನ್ನು ತೋರಿಸುವನು. ಅದೇ ರೀತಿ ಅಪ್ಪಾಜಿಯವರು ಧರ್ಮಗುರು ಬಸವಣ್ಣನವರು ಆದಿಯಾಗಿ ಅನೇಕ ಶರಣರು ಎಂಬ ಮಾವಿನ ಮರದಲ್ಲಿ ತಳೆದ ವಚನ ಸಾಹಿತ್ಯವೆಂಬ ಅನುಭವದ ಹಣ್ಣನ್ನು ತಿಂದು ಅರಗಿಸಿಕೊಂಡು ಇತರರಿಗೆ ಪ್ರವಚನದ ಮೂಲಕ ಜ್ಞಾನಾಮೃತವನ್ನು ಧಾರೆ ಎರೆಯುತ್ತಾ ಹೋದರು.

ಈ ರೀತಿ ವ್ಯತ್ಯಾಸಗಳ ಕಾರಣದಿಂದ ಜೀವನದ ಅರ್ಥವು ವ್ಯಕ್ತಿಯ ಅಥವಾ ಮಹಾತ್ಮರ ಚಿಂತನೆ ಮತ್ತು ಅನುಭವಗಳಿಗನುಸಾರವಾಗಿ ವಿವಿಧಾರ್ಥ ಪಡೆಯುತ್ತಾ ಹೋಗುತ್ತದೆ.

ಕೆಲವರ ಜೀವನ ಹೂವಿನ ಹಾಸಿಗೆಯಾಗಿರುತ್ತದೆ. ಕೆಲವರ ಜೀವನ ಮುಳ್ಳಿನ ಹಾಸಿಗೆ ಹಾಗಿರುತ್ತದೆ. ಕೆಲವರ ಜೀವನ (ಮಹಾತ್ಮರ ಜೀವನ) ಅನುಭವ ಆಧ್ಯಾತ್ಮದ ಜ್ಞಾನದ ಪುಷ್ಪಗಳ ಹಾಸಿಗೆಯಾಗಿರುತ್ತದೆ. ಈ ರೀತಿ ಅಪ್ಪಾಜಿಯವರ ಜೀವನ ಮುಳ್ಳಿನ ಹಾಸಿಗೆಯಾಗದೆ, ಕೇವಲ ಹೂವಿನ ಹಾಸಿಗೆಯಾಗದೆ ನಿಂತ ನೀರಾಗಿ ಕೊಳೆತ ಪ್ರದೇಶವಾಗದೆ ಆಧ್ಯಾತ್ಮದ ಅನುಭಾವವನ್ನು ಪಡೆದುಕೊಂಡು ಹರಿಯುವ ನದಿಯಂತಿದೆ. ಪೂಜ್ಯರು ಜಂಗಮರಾಗಿ ಬಸವ ತತ್ವವನ್ನು ಎಲ್ಲರಿಗೂ ಧಾರೆ ಎರೆಯುತ್ತಾ ಸಾಗಿದರು.

ಜಿ.ಎಸ್.ಶಿವರುದ್ರಪ್ಪನವರು ಹೇಳುವಂತೆ

- ಸಾಮಾನ್ಯರು ಜೀವನವನ್ನು ನೋಡುವ ದೃಷ್ಟಿಗೂ
- ಕವಿಯಾದವನು ಜೀವನವನ್ನು ನೋಡುವ ದೃಷ್ಟಿಗೂ
- ಅನುಭಾವಿಯಾದವನು ಜೀವನವನ್ನು ನೋಡುವ ದೃಷ್ಟಿಗೂ ವ್ಯತ್ಯಾಸವಿದೆ.

ಸಾಮಾನ್ಯನ ಜೀವನ ವ್ಯಥೆ ವ್ಯಥೆಯಾಗಿ ದುಡಿತವಾಗಿರುತ್ತದೆ. ಕವಿಯಾದವನ ಜೀವನ ವ್ಯಥೆ ಕಥೆಯಾಗಿ, ಜೀವನ ಹಾಡಾಗಿರುತ್ತದೆ. ಅನುಭಾವಿಯಾದವನ ಜೀವನ ವ್ಯಥೆ ಕಥೆಯಾಗಿ ಪಾಡು ಹಾಡಾಗಿ ಜೀವನ ದೇವನೊಲಿಸುವ ಸಾಧನವಾಗಿರುತ್ತದೆ. ಮಹಾತ್ಮರ ಜೀವನ ವ್ಯಥೆ ಕಥೆಯಾಗಿ ಪಾಡು ಹಾಡಾಗಿ ಜೀವನ ದೇವನನೊಲಿಸುವ ಸಾಧನವಾಗಿ, ಆ ಸಾಧನದ ದೇವ ಮಾರ್ಗವನ್ನು ಜನ ಸಾಮಾನ್ಯರಿಗೆ ತೋರಿಸುತ್ತಾ ಹೋಗುತ್ತಾರೆ. ಹಾಗೆಯೇ ಇಲ್ಲಿ ಅಪ್ಪಾಜಿಯವರಾದರೂ!

ಅಡಿಯಿಟ್ಟು ನಡೆದಲೆಲ್ಲ ಆಧ್ಯಾತ್ಮದ ಬೆಳಕನ್ನು ತಾವೂ ಹಚ್ಚಿಕೊಂಡು ಇತರರಿಗೂ ಆ ದೀಪದ ಬೆಳಕನ್ನು ಹಚ್ಚುತ್ತಾ ಹೋದರು. ಇವತ್ತು ನಾವು ನೋಡುತ್ತೇವೆ ಅಪ್ಪಾಜಿ ಹಚ್ಚಿದ ಮೊಟ್ಟ ಮೊದಲ ದೀಪ ಮಾತಾಜಿಯವರಿಗೆ ಮುಟ್ಟಿ ಪ್ರಜ್ವಲಿಸಿ ತದ ನಂತರ ಬಸವ ಚೈತನ್ಯದ ಬೆಳಕು ಗಂಗಾ ಮಾತಾಜಿಯಿಂದ ಹಿಡಿದು ಅನೇಕ ಜಂಗಮ ಪುಂಗವರು ಆ ಜ್ಞಾನದ ಬೆಳಕನ್ನು ಹಚ್ಚಿಕೊಂಡು ಬಸವ ತತ್ವವನ್ನು ಮೆರೆಸುತ್ತಿದ್ದಾರೆ. ಇದಕ್ಕೆಲ್ಲ ಸಾಕ್ಷಿ ಬಸವ ಧರ್ಮ ಪೀಠ ಅಲ್ಲವೆ..? ಅದಕ್ಕಾಗಿ ಅಪ್ಪಾಜಿಯವರು ಅನುಭಾವಿ ಅಷ್ಟೆ ಅಲ್ಲ ಪ್ರವಚನದ ಮೂಲಕ ಅನುಭಾವಿ ಪ್ರವಚನಕಾರರನ್ನು ತಯಾರು ಮಾಡಿದ ಪ್ರವಚನ ಪಿತಾಮಹರು. ಕೇವಲ ಜಗದ್ಗುರು ಅಷ್ಟೆ ಅಲ್ಲ. ಜಗದ ಸತ್ಯವನ್ನು ಅರಿತುಕೊಂಡು ಸತ್ ಮಾರ್ಗವನ್ನು ತೋರಿಸಿಕೊಡುವ ಜಗದ್ಗುರುಗಳನ್ನು ತಯಾರು ಮಾಡಿದ ಮಹಾಜಗದ್ಗುರು. ಹೀಗೆ ಅಪ್ಪಾಜಿಯವರು ಹಲವು ಅರ್ಥಗಳನ್ನೊಳಗೊಂಡ ಜೀವನದ ಉದ್ದೇಶಕ್ಕನುಸಾರವಾಗಿ ಈ ಭುವಿಯಲ್ಲಿ ಸ್ಥಾನಗಳಿಸಿಕೊಂಡು ತಮ್ಮ ಶುಭ ನಾಮವನ್ನು ಶರಣರ ಮನಗಳಲ್ಲಿ ಶಾಶ್ವತ ಸ್ಥಾನ ಗಳಿಸಿಕೊಂಡರು.

ಜೀವನವೆಂಬುದು ಕೇವಲ ಮನುಷ್ಯರಿಗೆ ಮಾತ್ರ ಸೀಮಿತವಲ್ಲ, ಜೀವವಿರುವ

ಗಿಡ ಮರ ಪ್ರಾಣಿ ಪಕ್ಷಿಗಳಿಗೆಲ್ಲಾ ತಮ್ಮದೇ ಆದ ಜೀವನವಿದೆ. ಎಷ್ಟೋ ಸಾರಿ ಮನುಷ್ಯ ತನ್ನ ಜೀವನ ಸಾರ್ಥಕ ಮಾಡಿಕೊಳ್ಳಲು ಗಿಡ, ಮರ, ಪಶು ಪಕ್ಷಿ ಪ್ರಾಣಿಗಳ ಜೀವನವನ್ನು ವೀಕ್ಷಿಸುತ್ತಾನೆ. ಒಂದು ಮರ ಬಿಸಿಲಿನ ತಾಪ ಪಡೆದುಕೊಂಡು ಬೇರೆಯವರಿಗೆ ನೆರಳಿನ ತಂಪು ನೀಡುತ್ತದೆ. ಅದೇ ರೀತಿ ಧರ್ಮಗುರು ಬಸವಣ್ಣನೆಂಬ ಮಂತ್ರಪುರುಷ ನೆಟ್ಟ ಅಪ್ಪಾಜಿಯವರೆಂಬ ಬೀಜ ಈ ಲಿಂಗಾಯತ ಸಮಾಜದ ಭೂಮಿಯಲ್ಲಿ ಬೆಳೆದು ಅನೇಕ ಕಷ್ಟವನ್ನು ಅನುಭವಿಸಿ, ಜಗತ್ತಿಗೆ ಪ್ರವಚನದ ಮೂಲಕ ಜಾಗೃತಿಗೈದು ಬಸವ ಮಹಾಮನೆ - ವಿಶ್ವಕಲ್ಯಾಣ ಮಿಷನ್ ಸ್ಥಾಪಿಸಿ ಅನೇಕ ಬಸವಳಿದ ಭಕ್ತರಿಗೆ ಆಧ್ಯಾತ್ಮದ ಆಶ್ರಯದ ನೆರಳು ಮಾಡಿಕೊಟ್ಟರು. ಅಷ್ಟೆ ಅಲ್ಲ ಬೇಸರಿಕೆಯನ್ನು ಕಳೆಯಲಿಕ್ಕೆ ಶರಣ ಮೇಳವೆಂಬ ಧರ್ಮಕ್ಷೇತ್ರ ಕೂಡಲ ಸಂಗಮಕ್ಕೆ ಆಹ್ವಾನಿಸಿ ಜಾಗ ಕಲ್ಪಿಸಿಕೊಟ್ಟರು. ಇಂದು ನಾವು ನೋಡುತ್ತೇವೆ ವರ್ಷಕ್ಕಿಂತ ವರ್ಷಕ್ಕೆ ಲಕ್ಷೋಪ ಲಕ್ಷ ಶರಣರು ತವರಿನ ಜ್ಞಾನದ ಹಾಲನ್ನು ತುಂಬಿಕೊಂಡು ಮಾತಾಜಿಯವರಿಂದ ಅನುಗ್ರಹಿ-ಸಲ್ಪಟ್ಟು ಸಂತೃಪ್ತರಾಗಿ ಹೋಗುತ್ತಾರೆ.

ಒಂದು ಬಳ್ಳಿ ತಾನು ಪರಾವಲಂಬಿಯಾಗಿ ವೃಕ್ಷದ ಆಶ್ರಯದಲ್ಲಿ ಬೆಳೆದರೂ ಪರರ ಹಿತಕ್ಕಾಗಿ ಸುವಾಸಿತ ಹೂ ನೀಡುತ್ತೆ. ಅದೇ ರೀತಿಯಾಗಿ ಅಪ್ಪಾಜಿಯವರು ಎಂಬ ಬಳ್ಳಿ, ಗುರು ಬಸವಣ್ಣನವರು ಎಂಬ ಮಹಾವೃಕ್ಷದ (ಅನುಗ್ರಹವನ್ನು) ಆಶ್ರಯವನ್ನು ಪಡೆದುಕೊಂಡು ಪರರ ಹಿತಕ್ಕಾಗಿ ಜ್ಞಾನದ ಸುವಾಸಿತ ಹೂ ನೀಡಿದರು.

ತಾ ಕಂಡ ಆಹಾರವನ್ನು ತಿನ್ನುವ ಮುಂಚಿತವಾಗಿ ತನ್ನ ಗುಂಪಿನವರನ್ನು ಕರೆಯುವ ಪ್ರವೃತ್ತಿ ಕಾಗೆ, ಕೋಳಿಗಳ ಬದುಕಿನಲ್ಲಿ ವಿಶಿಷ್ಟವಾದುದು. ಅಂದ ಹಾಗೆ ಅಪ್ಪಾಜಿಯವರು ತಾವು ಕಂಡುಕೊಂಡ ದಿವ್ಯಾನುಭವವನ್ನು ಕೇವಲ ತಾವೊಬ್ಬರೇ ಅನುಭವಿಸಿ ಸುಖಿಸಿ ಹೋಗಲಿಲ್ಲ ಮಾತ್ರವಲ್ಲ ಇತರರಿಗಾಗಿ ಪ್ರವಚನದ ಮೂಲಕ ಸಮಷ್ಟಿ ಪ್ರಜ್ಞೆಯನ್ನು ಕಲಿಸಿದರು. ಅವರದೆ ಮಾತಿನಲ್ಲಿ ಹೇಳುವುದಾದರೆ ವ್ಯಷ್ಟಿ ಯೋಗವನ್ನು ರಾಜಯೋಗ ಕಲಿಸಿದರೆ ಸಮಷ್ಟಿ ಯೋಗವನ್ನು ಪ್ರವಚನ ಯೋಗ ಕಲಿಸುತ್ತದೆ. ಹೀಗೆ ಜೀವನವನ್ನು ತನ್ನ ಏಳ್ಗೆಗಾಗಿ ಮಾತ್ರ ಮೀಸಲಾಗಿಡದೆ ಪರರ ಹಿತಕ್ಕಾಗಿ ಮೀಸಲಿಟ್ಟು, ಅಪ್ಪಾಜಿ ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಂಡರು.

ಗುರು ಬಸವಣ್ಣನವರು ಹೇಳುವಂತೆ ಮರೆದೊಡೆ ಮಾನವ ಅರಿದೊಡೆ ಶರಣ ಎನ್ನುವ ಹಾಗೆ ಮರೆತು ನಾಸ್ತಿಕನಾಗಿದ್ದ ಸಂಗಮೇಶ, ಆಸ್ತಿಕರಾಗಿ ದೇವರ ಸ್ವರೂಪ, ದೇವರ ಕಲ್ಪನೆ ಮಾನವನ ಜೀವನದ ಗುರಿ ಅನೇಕ ವಿಷಯಗಳ ಮೇಲೆ ಚಿಂತನ ನಡೆಸಿ ನಂಬಿಕೆಯನ್ನು ಬಲಪಡಿಸಿಕೊಂಡು ಬಸವ ತತ್ವಕ್ಕೆ ತಮ್ಮನ್ನು ಅರ್ಪಿಸಿಕೊಂಡು ನಾಡಿನ ಜನಕ್ಕೆ ಬಸವಾಮೃತವನ್ನು ಉಣಬಡಿಸಿದರು. ಗುರು ಬಸವಣ್ಣನವರು ಹೇಳುವಂತೆ ಇಲ್ಲಿ ಸಲ್ಲುವವರು ಅಲ್ಲಿಯೂ ಅಲ್ಲಿಯೂ ಸಲ್ಲುವರು. ಎನ್ನುವ ಹಾಗೆ ಅಪ್ಪಾಜಿ ತಾಳ್ಮೆ ತ್ಯಾಗ, ವಿಶಾಲ ಮನೋಭಾವನೆ, ಪ್ರೀತಿ ಕರುಣೆಗಳ ಸಮ್ಮಿಶ್ರಣ ಮನದಲ್ಲಿ ತುಂಬಿಕೊಂಡು ಒಬ್ಬ ಗುರುವಿನಲ್ಲಿ ಏನೇನು ಲಕ್ಷಣವಿರಬೇಕೋ ಅದೆಲ್ಲ ಸಾಧಿಸಿಕೊಂಡು ಇನ್ನೊಬ್ಬರ ನೋವು ದುಃಖದುಮ್ಮಾನಗಳನ್ನು ತಿಳಿಗೊಳಿಸಿ ತಾವು ನಗುವುದರ ಜೊತೆಗೆ ಇತರರನ್ನು ನಗಿಸುವುದರ ಒಡನೆ ಆಧ್ಯಾತ್ಮದ ತಿರುಳನ್ನು ತಿಳಿಸಿದರು. ಅದಕ್ಕಾಗಿ ಅಪ್ಪಾಜಿ ಇಲ್ಲಿ ಸಂದರು. ಕೊನೆಗೆ ಅವರು ಲಿಂಗೈಕ್ಯರಾಗುವಾಗ ನಗುತ್ತಾ ಬಯಲಾದರು. ಇದು ಮಹಾತ್ಮರ ವಿಶೇಷ ಗುಣ. ಅಲ್ಲಿಯೂ ಸಂದರು ಎಂದರ್ಥ.

ಇವತ್ತು ನಾವು ಎಷ್ಟೋ ಸಂದರ್ಭದಲ್ಲಿ ಸಾರ್ಥಕ ಬದುಕಿನ ಹಾದಿಯಲ್ಲಿ ಹಲವಾರು ಎಡರು ತೊಡರುಗಳನ್ನು ಕಾಣುತ್ತೇವೆ. ನೆರೆಮನೆಯ ನಲಿವಿಗೆ ಪ್ರಯತ್ನಿಸುವಾಗ ನಮ್ಮ ಮನೆಗೆ ಬೆಂಕಿ ಬೀಳುವುದು ಅವುಗಳೆಲ್ಲವನ್ನು ಸಹಿಸಿಕೊಂಡು ಮುಂದುವರೆದಾಗ ಮಾತ್ರ

ಮಾನವ ಜೀವನ ಸಾರ್ಥಕವಾಗುತ್ತದೆ. ಅಂದು ಮಹಾತ್ಮ ಗಾಂಧೀಜಿಯವರು ಬ್ರಿಟೀಷರ ಪೆಟ್ಟಿಗೆ ಮನಕೊಟ್ಟು ನೊಂದು ನೊಂದು ಭಾರತಕ್ಕೆ ಸ್ವಾತಂತ್ರ್ಯ ತರುವುದರ ಮೂಲಕ ಜೀವನ ಸಾರ್ಥಕ ಪಡಿಸಿಕೊಂಡರು. ಏಸುಕ್ರಿಸ್ತ ತನ್ನ ದೇಹಕ್ಕೆ ಮೊಳೆ ಹೊಡೆಯುವಾಗ ತಪ್ಪಿತಸ್ಥರನ್ನು ಕ್ಷಮಿಸು ಎಂದು ಪ್ರಾರ್ಥಿಸಿ ತಾಳ್ಮೆಯ ಸ್ವರೂಪ ಕಣ್ಮುಂದೆ ನಿಲ್ಲಿಸಿ ಹೊಸ ಧರ್ಮ ಸ್ಥಾಪನೆಯ ಮೂಲಕ ಜೀವನ ಸಾರ್ಥಕ ಪಡಿಸಿಕೊಂಡರು. ಬುದ್ಧ, ಮಹಾವೀರ, ಮಹಮ್ಮದ್ ಪೈಗಂಬರ, ಗುರುನಾನಕ ಹೀಗೆ ಅನೇಕ ಪ್ರವಾದಿಗಳು ಅನೇಕ ರೀತಿಯಿಂದ ಕಷ್ಟವನ್ನು ಅನುಭವಿಸಿ ತಮ್ಮ ಧರ್ಮವನ್ನು ಕೊಡುವುದರ ಜೊತೆಗೆ ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಜೀವನ ಪರ್ಯಂತರ ಹೋರಾಟ ನಡೆಸಿ ತಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಂಡರು. ಅಷ್ಟೆ ಏಕೆ ಇದೆಲ್ಲಕ್ಕೂ ಮೀರಿದ, ಜಿಡ್ಡುಗಟ್ಟಿದ ಸಂಪ್ರದಾಯದ ವಿರುದ್ಧ ಬಂಡೆದ್ದ ಗುರು ಬಸವಣ್ಣನವರ ಕ್ರಾಂತಿ ಎಂತಹುದು ಗೊತ್ತೆ?

ಧರ್ಮಪಿತ ಬಸವಣ್ಣನವರು ಸಮಗ್ರ, ಒಳಿತಿಗಾಗಿ, ಜಗತ್ತಿನ ಉದ್ಧಾರಕ್ಕಾಗಿ ಸ್ತ್ರೀ ಸಮಾನತೆಗಾಗಿ, ದಲಿತರ ಉದ್ಧಾರಕ್ಕಾಗಿ, ಶೋಷಿತ ವರ್ಗಕ್ಕಾಗಿ ಆಶಾಕಿರಣವಾಗಿ ಬಂದ ಅಪ್ಪನವರು. ಮೂಢ ಸಂಪ್ರದಾಯಗಳನ್ನು ಅಲ್ಲಗಳೆದು ಸ್ಥಿರ ದೇವಾಲಯಕ್ಕೆ ತಿಲಾಂಜಲಿ ಹಾಡಿ ದೇವ-ಭಕ್ತರ ಮಧ್ಯೆ ಅವಿನಾಭಾವ ಸಂಬಂಧವನ್ನು ಕಲ್ಪಿಸಿ ಮಧ್ಯಸ್ಥಿಕೆ ವಹಿಸಿದ ಪೂಜಾರಿ ಎಂಬ ದಲ್ಲಾಳಿಯ ಸ್ಥಾನವನ್ನು ನುಚ್ಚು ನೂರು ಮಾಡಿದರು. ದೇಹವನ್ನು ದೇಗುಲವನ್ನಾಗಿ ಮಾಡಿಕೊಳ್ಳುವ ಹೊಸ ದಾರಿಯನ್ನು ತೋರಿಸಿಕೊಟ್ಟು ಎಲ್ಲರಿಗೂ ಲಿಂಗವನ್ನು ಕಟ್ಟಿ ಸಮಾನತೆಯಿಂದ ಕೂಡಿ ಬಾಳಿ ಬದುಕಲು, ಪ್ರಾರ್ಥಿಸಲು ಅನುಭವ ಮಂಟಪವೆಂಬ ಜಗತ್ತಿನ ಮೊಟ್ಟ ಮೊದಲ ಸಂಸತ್ತು ಸ್ಥಾಪಿಸಿ ವಿಶ್ವಗುರು ಆಗಿ ಶ್ರೇಷ್ಠ ಮಹಾ ಪ್ರವಾದಿಯಾದರು. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರ ಸಮೂಹವನ್ನು ತಯಾರು ಮಾಡಿ, ಸಮಾಜದಲ್ಲಿ ಸಮಾನತೆಯ ಒಳಿತಿಗಾಗಿ ಅಂತರ್ವರ್ಣೀಯ ವಿವಾಹಕ್ಕೆ ಪ್ರೋತ್ಸಾಹಿಸಿ ಶತ ಶತಮಾನದಿಂದ ಬೇರು ಬಿಟ್ಟಿದ್ದ ಸಂಪ್ರದಾಯವನ್ನು ಬುಡ ಸಮೇತ ಕಿತ್ತೆಸೆದರು. ಕೊನೆಗೆ ಅದೇ ಸಂಪ್ರದಾಯದವರ ಅಧಿಕಾರದ ಅಟ್ಟಹಾಸದಿಂದ ಗುರು ಬಸವಣ್ಣನವರಿಗೆ ಆದ ಶಿಕ್ಷೆ ಗಡಿಪಾರು; ಇಂತಹ ಶರಣರನ್ನು ಬಿಟ್ಟು ದೂರ ಹೋಗುವ ಶಿಕ್ಷೆ ಹೊಂದಿದ ಧರ್ಮಕರ್ತ ಬಸವಣ್ಣನವರು ಕೊಟ್ಟ ಸೂತ್ರ ಯಾವುದು ಗೊತ್ತೆ? ಜನ ಬದುಕಲಿ ಜಗ ಬದುಕಲಿ ಎಂಬ ಕಾಯಕ ಸೂತ್ರ ಕೊಟ್ಟರು. ಕಾಯಕವೇ ಕೈಲಾಸ; ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸಿದರು. ದಯವೇ ಧರ್ಮದ ಮೂಲ ಎಂದು ದಯದ ಮಹತ್ವವನ್ನು ತಿಳಿಸಿದರು. ಮೇಲಾಗಲೊಲ್ಲದೆ ಕೀಳಾಗಿ ಎಲ್ಲರಿಗಿಂತ ಕಿರಿಯ ಎಂಬ ಭಾವ ಹೊತ್ತು ಭಕ್ತಿ ಭಂಡಾರಿ ಎನಿಸಿ ಅನೇಕ ಕಷ್ಟವನ್ನು ಅನುಭವಿಸಿ ಈ ವಿಶ್ವಕ್ಕೆ ಲಿಂಗಾಯತ ಧರ್ಮವನ್ನು ಕೊಡುವುದರ ಜೊತೆಗೆ ಏಕದೇವೋಪಾಸನೆಯನ್ನು (ಪ್ರತಿಯೊಬ್ಬರಿಗೆ ಲಿಂಗದೇವನ ಕುರುಹಾದ ಇಷ್ಟಲಿಂಗವನ್ನು ಅವರ ಅಂಗದ ಮೇಲೆ ಧರಿಸಿ) ಕಲಿಸುವುದರ ಜೊತೆಗೆ ತಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಂಡರು, ಮುಕ್ತಾತ್ಮರಾದರು.

ಅದೇ ರೀತಿಯಲ್ಲಿ ಮುಂದೆ 20ನೇ ಶತಮಾನದಲ್ಲಿ ಸಂಪ್ರದಾಯ, ಮನೆ ಮಠಗಳ, ಮುಗ್ಧ ಜನರ ಮನೆಯ ಜಗಲಿಯ ಮೇಲೆ ಬಯ್ಚಿಟ್ಟು ವಚನಗಳನ್ನು ಸಂಶೋಧಿಸಿ, ಸಂಘಟಿಸಿ, ಕೂಡಿಸಿ, ತನ್ನನ್ನು ತಾ ಅರ್ಪಿಸಿಕೊಂಡು ಸ್ಥಾವರಾತ್ಮಕ - ಜಂಗಮಾತ್ಮಕ ಎಲ್ಲ ಆಸ್ತಿಯನ್ನು ಮಾರಿ ಅದರ ದುಡ್ಡಿನಿಂದ ವಚನ ಸಾಹಿತ್ಯ ಪುಸ್ತಕವನ್ನು ಹೊರತೆಗೆಯುವುದರ ಜೊತೆಗೆ ಫ.ಗು.ಹಳಕಟ್ಟಿಯವರು ಜೀವನ ಸಾರ್ಥಕ ಪಡಿಸಿಕೊಂಡರು.

ಹಾಗೆಯೇ, ಇಂತಹ ಗ್ರಂಥಸ್ಥ ಸಾಹಿತ್ಯ -ಓದಿದ್ದವರಿಗೆ ಮಾತ್ರ ಎಟುಕುವಂತಹ ಈ

ಸಾಹಿತ್ಯವನ್ನು ಅಪ್ಪಾಜಿಯವರು ವಚನ ಸಾಹಿತ್ಯದ ಸಾರವನ್ನು ಓದಿ, ಅರಗಿಸಿಕೊಂಡು ಜನಮಾನಸಕ್ಕೆ ಮನಮುಟ್ಟುವಂತೆ ಪ್ರವಚನದ ಮೂಲಕ ಹಳ್ಳಿಗೆ ಏಕರಾತ್ರಿಯಂತೆ, ಪಟ್ಟಣಕ್ಕೆ ಪಂಚರಾತ್ರಿಯಂತೆ ಬಸವ ತತ್ವ ಪ್ರಚಾರ ಗೈದು, ಪ್ರವಚನದ ಪಟುವಾಗಿ ಪ್ರವಚನ ಪಿತಾಮಹ ಬಿರುದು ಹೊತ್ತು ನಾಡಿನಾದ್ಯಂತ ಪ್ರವಚನ ಗೈದ ಅಪ್ಪಾಜಿ ಜನರ ಹೃದಯದಲ್ಲಿ ಅಚ್ಚಳಿಯದ ಧೀಮಂತ ಗುರು. ಅವರು ಪಟ್ಟ ಕಷ್ಟಕ್ಕೆ ಎಣೆಯಿಲ್ಲ. ಅವರು ಚಿಕ್ಕವರಿರುವಾಗ ಬಡತನ ವಿರುದ್ಧ ಹೋರಾಟ ಮಾಡಿ, ದೊಡ್ಡವರಾದಾಗ ಅನ್ಯಾಯದ ವಿರುದ್ಧ ಹೋರಾಟ ಮಾಡಿ ಅನೇಕ ಸಾಮಾಜಿಕ ಮತ್ತು ಕೌಟುಂಬಿಕ ಕಷ್ಟಗಳನ್ನು ಅನುಭವಿಸಿ ಇಡೀ ತಮ್ಮ ಜೀವಿತಾವಧಿಯಲ್ಲಿ ಅದ್ಭುತವಾದ ಬಸವ ಸಾಮ್ರಾಜ್ಯವನ್ನು ಕಟ್ಟುವುದರ ಜೊತೆಗೆ ತಮ್ಮ ಜೀವನ ಜ್ಯೋತಿಯನ್ನು ಜಗತ್ತಿಗೆ ಬೆಳಗುವುದರ ಜೊತೆಗೆ ಗುರು ಬಸವಣ್ಣನವರ ನಂತರ 800 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಸ್ತ್ರೀ ಸಮಾನತೆಯನ್ನು ಎತ್ತಿ ಹಿಡಿದು ಸ್ತ್ರೀಯರಿಗೆ ಗುರು ಪೀಠದ ಅವಶ್ಯಕತೆ ಇದೆ ಎಂದರಿತು ಪ್ರಪ್ರಥಮ ಮಹಿಳಾ ಅಕ್ಕಮಹಾದೇವಿ ಜಗದ್ಗುರು ಅನುಭಾವ ಪೀಠ ಸ್ಥಾಪಿಸಿ, ಪ್ರಥಮವಾಗಿ ದಿವ್ಯಯೋಗಿಣಿ, ವೀರ ಶಿರೋಮಣಿ, ಜ್ಞಾನ ತರಂಗಿಣಿ, ಉತ್ತುಂಗ ಸಾಹಿತಿ, ಕ್ರಾಂತಿಕಾರಿ ಧರ್ಮ ಪ್ರಸಾರಕರು ಆದ ತಮ್ಮ ಮಾನಸ ಸುಪುತ್ರಿಯಾದ ಪೂಜ್ಯ ಶ್ರೀ ಪ್ರಣವ ಸ್ವರೂಪಿ ಮಾತಾಜಿಯವರನ್ನು ಆ ಪೀಠಕ್ಕೆ ಜಗದ್ಗುರುವನ್ನಾಗಿ ಮಾಡಿ, ಸ್ತ್ರೀ ಸಮಾನತೆಯನ್ನು ಆಧುನಿಕ ಪ್ರಪಂಚದಲ್ಲಿ ಪುನಃ ಹುಟ್ಟು ಹಾಕಿ, ಸಂಪೂರ್ಣ ಸಮಾನತೆಯ ಹಕ್ಕುಕೊಟ್ಟರು. ಕೊನೆಯಲ್ಲಿ ಪರಮ ಪೂಜ್ಯ ಶ್ರೀ ಮಹಾಜಗದ್ಗುರು ಮಾತಾಜಿ 1992ರಲ್ಲಿ ಕೂಡಲ ಸಂಗಮದಲ್ಲಿ ಸ್ಥಾಪಿಸಿದ ಬಸವ ಧರ್ಮದ ಮಹಾಜಗದ್ಗುರು ಪೀಠಕ್ಕೆ ಪ್ರಥಮ ಗುರುವಾಗಿ ಜಗದ್ಗುರುವಾಗಿ, ಜಗದ್ಗುರು ಎನ್ನುವ ಪದಕ್ಕೆ ವಿಶಿಷ್ಟ ಅರ್ಥವನ್ನು ಕೊಟ್ಟು ಇನ್ನೊಂದು ಅಳಿಯದ, ಸುಭದ್ರವಾದ ಬಸವ ಧರ್ಮವನ್ನು ಪುನರುತ್ಥಾನಿಸಿ ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಂಡ ಧೀಮಂತ, ದಿವ್ಯಬೆಳಗಿನ ಚೇತನಕ್ಕೆ 16ನೇ ಲಿಂಗೈಕ್ಯ ಸಂಸ್ಮರಣಾರ್ಥವಾಗಿ ಗುರುವಿನ ಪಾದಕಮಲಗಳಿಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸಿ, ಧರ್ಮದ ಮಾರ್ಗದಲ್ಲಿ ನಾವು ನಡೆಯಲು ಧೈರ್ಯವನ್ನು ಉತ್ಸಾಹವನ್ನು ಪೂಜ್ಯರು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

ಕಲ್ಯಾಣ ಕಿರಣ ಓದುಗ ಶರಣ ಬಂಧುಗಳಲ್ಲಿ ಮನವಿ

ಕಲ್ಯಾಣ ಕಿರಣ ಸಕಾಲದಲ್ಲಿ ತಲುಪದಿರುವುದಕ್ಕೆ ಸರಿಯಾದ ವಿಳಾಸವಿಲ್ಲದಿರುವುದು ಕಾರಣವಾಗಿದ್ದು ಪ್ರತಿ ತಿಂಗಳು ಸುಮಾರು 100 -150ರವರೆಗೆ ಪ್ರತಿಗಳು ವಾಪಸ್ಸಾಗುತ್ತವೆ. ಆದ್ದರಿಂದ ದಯವಿಟ್ಟು ಸರಿಯಾದ ಪೂರ್ಣ ವಿಳಾಸ ಮತ್ತು ಪಿನ್‌ಕೋಡ್ ಕೊಡದೇ ಇರುವವರು ಕಡ್ಡಾಯವಾಗಿ ಪಿನ್‌ಕೋಡ್ ಹಾಗೂ ತಮ್ಮ ದೂರವಾಣಿ ಸಂಖ್ಯೆಗಳನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿ. ಕಲ್ಯಾಣ ಕಿರಣದ ಯಾವುದೇ ಸಮಸ್ಯೆಯಿರುವವರು ಈ ಕೆಳಗೆ ನಮೂದಿಸಿದ ಜಂಗಮ ದೂರವಾಣಿಗಳಿಗೆ ಎಸ್.ಎಂ.ಎಸ್. (ಮೆಸೇಜ್) ಅಥವಾ ಕರೆ ಮಾಡಿ ನಿಮ್ಮ ವಿಳಾಸಗಳನ್ನು ತಿಳಿಸಬೇಕಾಗಿ ಕೋರುತ್ತೇವೆ.

ದೂರವಾಣಿಗಳ ಸಂಖ್ಯೆಗಳು: 8970898205, 9620058492, 8892912123, 7760627640

ಡಾ|| ಚಿ.ಮೂರವರ ಅಸಂಬದ್ಧ ಪ್ರಲಾಪ

- ಎನ್.ಪುಟ್ಟರುದ್ರ

ವೀರಶೈವ ಧರ್ಮ ಒಡೆಯಲು ಯತ್ನ ಎಂಬ ಶೀರ್ಷಿಕೆಯಲ್ಲಿ ಡಾ|| ಚಿದಾನಂದ ಮೂರ್ತಿಯವರು ಕೆಲವು ಮಠಾಧೀಶರು ಮತ್ತು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ವೀರಶೈವ ಮತ್ತು ಲಿಂಗಾಯತ ಎಂದು ವೀರಶೈವ ಧರ್ಮವನ್ನು ಬೇರೆ ಮಾಡುತ್ತಿದ್ದಾರೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಅಪವಾದ ಬೇರೆಯವರಿಗಿಂತಲೂ ಅವರಿಗೇ ಹೆಚ್ಚು ಅನ್ವಯಿಸುತ್ತದೆ ಎಂದು ನನ್ನ ಅನಿಸಿಕೆ. ಏಕೆಂದರೆ ವೀರಶೈವ ಎಂಬುದು ಒಂದು ಸ್ವತಂತ್ರ ಧರ್ಮವೇ ಅಲ್ಲ. ಅದು ಹಿಂದೂ ಧರ್ಮವೃಕ್ಷದ ಶೈವ ಎಂಬ ಕೊಂಬೆಯ ಒಂದು ಟಿಸಿಲು ಮಾತ್ರ. ಅದರ ಸಂಹಿತೆಯಾಗಿದೆ ಸಂಸ್ಕೃತ ಭಾಷೆಯಲ್ಲಿನ ವೇದ ಆಗಮ, ಪುರಾಣಗಳು. ಅದು ತ್ರಿ ಮೂರ್ತಿಗಳಲ್ಲಿ ಒಬ್ಬನಾದ ಶಿವನಲ್ಲಿ ವೀರತಮವಾದ ಭಕ್ತಿಯನ್ನು ಬೋಧಿಸುತ್ತದೆ. ಅಲ್ಲಿ ಬಹುದೇವತೋಪಾಸನೆಯಿದೆ ಹಾಗೂ ಚಾತುರ್ವರ್ಣ ಸಾಮಾಜಿಕ ವ್ಯವಸ್ಥೆಯ ಅನಿಷ್ಟ ಪಿಡುಗಿದೆ. ವೈದಿಕ ಧರ್ಮದ ಆಚರಣೆಗಳಾದ ಗಂಗಾ ಪೂಜೆ, ಅಗ್ನಿ ಪೂಜೆ, ನಾಗರ, ನವಗ್ರಹ, ವಿನಾಯಕ, ವೀರಭದ್ರ, ಸ್ಥಾವರಲಿಂಗ ಪೂಜೆ ಇತ್ಯಾದಿಗಳನ್ನು ರೂಢಿಸಿ ಕೊಂಡಿರುವುದಲ್ಲದೆ ಜಾತಕ, ಪಂಚಾಂಗ, ಜ್ಯೋತಿಷ್ಯಗಳಲ್ಲಿ ನಂಬಿಕೆಯನ್ನಿರಿಸಿಕೊಂಡಿದೆ. ಶೂದ್ರ ವೀರಶೈವರಲ್ಲಿ ಮಾಂಸಾಹಾರಿಗಳೂ ಇದ್ದಾರೆ.

ಆದರೆ ವೇದ, ಆಗಮಗಳ ಮಾನ್ಯತೆಯನ್ನು ಪ್ರಶ್ನಿಸಿದ ಲಿಂಗಾಯತ ಧರ್ಮವು ಅಹಿಂದು ಹಾಗೂ ಅವೈದಿಕ ಧರ್ಮವಾಗಿದೆ. ಅದು ಬೇರಾವ ವೃಕ್ಷದ ಕೊಂಬೆಯೂ ಅಲ್ಲ, ಟಿಸಿಲೂ ಅಲ್ಲ, ಸ್ವತಂತ್ರ ಕಲ್ಪವೃಕ್ಷ, ಅದರ ಸಂಹಿತೆಯಾಗಿದೆ- ಅಚ್ಚ ಕನ್ನಡದಲ್ಲಿರುವ ವಚನ ಶಾಸ್ತ್ರ, ಲಿಂಗಾಯತರು ಏಕದೇವೋಪಾಸಕರು. ತ್ರಿ ಮೂರ್ತಿಗಳನ್ನಾಗಲಿ, ಇತರೇ ದೇವತೆಗಳನ್ನಾಗಲಿ ಅವರು ಪೂಜಿಸುವವರಲ್ಲ. ಲಿಂಗಾಯತ ಧರ್ಮವು ಎಲ್ಲರನ್ನೂ ಇಂಬಿಟ್ಟುಕೊಳ್ಳುವ ಧರ್ಮ. ಅಸ್ಪೃಶ್ಯತೆ, ಅಂಧಶ್ರದ್ಧೆ ಮೂಢನಂಬಿಕೆಗಳನ್ನು ಖಂಡಿಸಿರುವ ಧರ್ಮ. ಹಿಂದೂ ಧರ್ಮದ ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಮಾನ್ಯ ಮಾಡದಿರುವುದರಿಂದ ಚಾತುರ್ವರ್ಣ ವಿಭಜನಾರೀತ್ಯ ಪರಿಗಣಿಸಲ್ಪಡಬೇಕಾದ ಶೂದ್ರತ್ವದಿಂದ ಹೊರಗುಳಿದ ಸ್ವತಂತ್ರ ಧರ್ಮವಾಗಿದೆ. ಕೇವಲ ಸರ್ವೇಜನಾಃ ಸುಖಿನೋಭವಂತು ಎಂದು ಹೇಳದೆ. ಸಕಲ ಜೀವಾತ್ಮರಿಗೆ ಲೇಸನು ಬಯಸುವವನೇ ಕುಲಜನು ಎಂದು ಹೇಳಿದ ಉತ್ಕೃಷ್ಟತೆಯ ಧರ್ಮವಾಗಿದೆ. ಕಾಯಕ - ದಾಸೋಹ - ಸಮಾನತೆಯ ಹಿರಿಮೆಯನ್ನು ಮನವರಿಕೆ ಮಾಡಿಕೊಟ್ಟ, ದೇವ - ಭಕ್ತರ ನಡುವೆ ಪೂಜಾರಿಯ ಮಧ್ಯಸ್ಥಿಕೆಯನ್ನು ತಪ್ಪಿಸಿದ, ಅಹಿಂಸಾ ತತ್ವ ಪ್ರತಿಪಾದಿಸುವ, ಯಜ್ಞ - ಯಾಗಾದಿಗಳನ್ನು ನಿಷೇಧಿಸಿದ, ಸರ್ವಜ್ಞ ಕವಿ ಉಲ್ಲೇಖಿಸಿರುವ ಬಸವಣ್ಣನವರು ಸಮಾಜದ ಸರ್ವತೋಮುಖ ಶ್ರೇಯೋಭಿವೃದ್ಧಿಗಾಗಿ ಕೊಟ್ಟ ವಿನೂತನ ಧರ್ಮ.

ವಸ್ತುಸ್ಥಿತಿ ಹೀಗಿರುವಾಗ ವೀರಶೈವ, ಲಿಂಗಾಯತ ಪದಗಳನ್ನು ಪರ್ಯಾಯವಾಗಿ ಬಳಸುವುದು ವಿಪರ್ಯಾಸವಲ್ಲವೇ? ಇದು ಸಂಶೋಧಕರ ಜಾಣತನವನ್ನು ತೋರಿಸುತ್ತದೆ! ಏನೇ ಆಗಲಿ, ಆಗೊಮ್ಮೆ, ಈಗೊಮ್ಮೆ ಇಂತಹ ಅತಾರ್ಕಿಕ ವಿಷಯಗಳೆಂಬ ಬಾಣಗಳನ್ನು ತಮ್ಮ ಸಂಪ್ರದಾಯ ಬತ್ತಳಿಕೆಯಿಂದ ಹೊರತೆಗೆದು ಜನಸಾಮಾನ್ಯರ ಮೇಲೆ ವೃತ್ತಪತ್ರಿಕೆಗಳ ಮೂಲಕ ಪ್ರಯೋಗಿಸುವುದು ನಮ್ಮ ಸಂಶೋಧಕರಿಗೆ ರೂಢಿಯಾಗಿಬಿಟ್ಟಿದೆ! ಅವರು ಸಂಶೋಧಕರೆಂಬ ಹಣೆಪಟ್ಟಿ ಹೊಂದಿರುವುದರಿಂದ ಪತ್ರಿಕೆಗಳವರೂ ಸಹ ಕೂಡಲೇ ಪ್ರಚಾರ ನೀಡುವರು. ಆದರೆ ಅದಕ್ಕೆ ಪ್ರತಿಕ್ರಿಯೆಯಾಗಿ ಜನಸಾಮಾನ್ಯರಿಂದ ಬರಬಹುದಾದ ಪ್ರತ್ಯುತ್ತರಗಳು ಪೂರ್ಣ ಪ್ರಮಾಣದಲ್ಲಿ ಪತ್ರಿಕೆಗಳಲ್ಲಿ ಮುದ್ರಿಸಲ್ಪಡುವುದು ವಿರಳವೆಂದು ಹೇಳದೆ ಗತ್ಯಂತರವಿಲ್ಲ. ಜ್ಞಾನವು ನಿಂತ ನೀರಾಗಬಾರದಲ್ಲವೇ?

ಚಿಂತೆಯಿಲ್ಲ. ಸಂಶೋಧಕರಾದ ಡಾ|| ಚಿದಾನಂದ ಮೂರ್ತಿಯವರು ಮೇಲ್ಕಂಡ ಅಂಶಗಳ ಕಡೆ ದಯವಿಟ್ಟು ಗಮನ ಹರಿಸಿ, ಸಮಂಜಸ ಉತ್ತರ ಕೊಟ್ಟು ಕೃತಕೃತ್ಯತೆ ಪಡೆಯುವರೆಂಬ ಆಶಾಭಾವನೆ ಇಟ್ಟುಕೊಳ್ಳಬಹುದೇ?

ಕಾಶಿಯಲ್ಲಿ ಸಂಸ್ಕೃತ ಕಲಿತ ಸ್ವಾಮಿಗಳು ಲಿಂಗಾಯತ ಮಠಕ್ಕೆ ಅರ್ಹರೆ?

- ಪೂಜ್ಯ ಚನ್ನಬಸವಾನಂದ ಸ್ವಾಮೀಜಿ

ವಿಶ್ವಗುರು ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟಿರುವ ಲಿಂಗಾಯತ ಧರ್ಮವು ಸ್ವತಂತ್ರ ಸ್ವಾವಲಂಬಿ ಪ್ರಗತಿಪರ ಹಾಗೂ ಅತ್ಯಂತ ಸರಳವಾದ ಧರ್ಮವಾಗಿದೆ. ಜನ ಸಾಮಾನ್ಯರು ಆಡು ಭಾಷೆಯನ್ನೇ ದೇವ ಭಾಷೆಯನ್ನಾಗಿಸಿ ಕನ್ನಡಕ್ಕೆ ದೈವತ್ವ ತಂದು ಕೊಟ್ಟವರು ಶ್ರೀ ಗುರು ಬಸವಣ್ಣನವರು. ಗುರು ಬಸವಣ್ಣನವರು ಅವತರಿಸುವುದಕ್ಕೂ ಮುಂಚೆ ಕೇವಲ ಸಂಸ್ಕೃತದಲ್ಲಿ ಮಾತ್ರ ಮಂತ್ರಗಳನ್ನು ಹೇಳಲಾಗುತ್ತಿತ್ತು. ದ್ರಾವಿಡ ಭಾಷೆಗಳೆಂದರೆ ಕೀಳು ಎಂದು ಪುರೋಹಿತರು ಪರಿಗಣಿಸುತ್ತಿದ್ದರು. ಸಂಸ್ಕೃತ ಒಂದೆ ದೇವಭಾಷೆ ಎಂದು ಹೇಳುತ್ತ ಆ ಭಾಷೆಯನ್ನು ಶೂದ್ರರು, ಅಸ್ಪೃಶ್ಯರು ಹಾಗೂ ಮಹಿಳೆಯರು ಕಲಿಯಬಾರದೆಂದು ಬಹು ಸಂಖ್ಯಾತರನ್ನು ಧರ್ಮ ಸಂಸ್ಕಾರದಿಂದ ವಂಚಿಸಿ ಬಹುಜನ ಸಮಾಜವನ್ನು ಕತ್ತಲೆಯೊಳಗಿರಿಸಿದರು. ಇದನ್ನು ಕಂಡ ಗುರು ಬಸವಣ್ಣನವರು ಕನ್ನಡದಲ್ಲಿಯೆ ವಚನಗಳನ್ನು ಹೇಳಿಕೊಂಡು ಮೇಲು - ಕೀಳು ಎಂಬ ಜಾತಿಭೇದವಿಲ್ಲದೆ, ಶ್ರೀಮಂತ - ಬಡವ ಎಂಬ ವರ್ಗಭೇದವಿಲ್ಲದೆ, ಸ್ತ್ರೀ - ಪುರುಷ ಎಂಬ ಲಿಂಗಭೇದವಿಲ್ಲದೆ ಬ್ರಾಹ್ಮಣ - ಶೂದ್ರರೆಂಬ ವರ್ಣಭೇದವೂ ಇಲ್ಲದೆ ಯಾವ ಪೂಜಾರಿಗಳ ಸಹಾಯವೂ ಇಲ್ಲದೆ ಸ್ವತಂತ್ರವಾಗಿ ದೇವನ ಪೂಜೆಗೈಯಲು ಕಲಿಸಿದರು. ಸೃಷ್ಟಿಕರ್ತನ ಕುರುಹಾಗಿ ಇಷ್ಟಲಿಂಗವನ್ನು ಕರುಣಿಸಿದರು. ದಲಿತರು, ಅಸ್ಪೃಶ್ಯರು ಸಹ ದೀಕ್ಷೆಯನ್ನು ಪಡೆದು ಸಾಧನೆಗೈದು ಲಿಂಗದೇವನ ಅನುಗ್ರಹ ಪಡೆಯುವಂತೆ ಮಾಡಿದರು.

ಆದರೆ ಇಂದು ಗುರು ಬಸವ ಪ್ರಣೀತ ಲಿಂಗಾಯತ ಧರ್ಮದ ಪ್ರಚಾರ ಮಾಡಬೇಕಿದ್ದ ಬಹುತೇಕ ಮಠಗಳಿಗೆ ವಚನ ಸಾಹಿತ್ಯದ ಮೂಲಭೂತ ಜ್ಞಾನವು ಇಲ್ಲದ ಮತ್ತು ವೀರಶೈವವಾದಿಗಳ ಶಿವಯೋಗ ಮಂದಿರ ಅಥವಾ ಕಾಶಿಗೆ ಹೋಗಿ ಸಂಸ್ಕೃತ ಶ್ಲೋಕಗಳ ಗಿಳಿಪಾಠ ಮಾಡಿಕೊಂಡು ಬಂದ ಸ್ವಾಮಿಗಳನ್ನು ಪಟ್ಟಗಟ್ಟಿರುವುದರಿಂದ ಲಿಂಗಾಯತ ಸಮಾಜವು ಸ್ವಧರ್ಮದ ಜ್ಞಾನವಿಲ್ಲದೆ ದುಃಸ್ಥಿತಿಯನುಭವಿಸುತ್ತಿದೆ.

ನಿನ್ನೆ ಜೂನ್ 8ರಂದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆಯ ತಾಲ್ಲೋಕಿನ ಹಿರೇಹಳ್ಳಿಯಲ್ಲಿ ನಮ್ಮ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು. ಪೂಜ್ಯ ಲಿಂ. ವೀರಭದ್ರಪ್ಪ ಮಹಾಸ್ವಾಮಿಗಳ 26ನೆಯ ಲಿಂಗೈಕ್ಯ ಸಂಸ್ಮರಣೆ ಆದಾಗಿತ್ತು. ಅವರು ಒಬ್ಬ ತ್ಯಾಗಿಗಳು ಅನುಭಾವಿಗಳೂ ಆಗಿದ್ದರು. ನೆನೆದವರ ಮನದಲ್ಲಿ ಎಂಬಂತೆ ಭಕ್ತರು ತಮ್ಮನ್ನು ಸ್ಮರಿಸುತ್ತಿದ್ದಾರೆಂಬುದನ್ನು ದೈವೀ ತರಂಗಗಳಿಂದಲೇ ಗ್ರಹಿಸಿಕೊಂಡು ಭಕ್ತರ ಮನೆಗೆ ದಿಢೀರನೆ ಭೇಟಿ ಕೊಡುತ್ತಿದ್ದರು ಎಂಬುದನ್ನು ಅವರ ಅನೇಕ ಜನ ಭಕ್ತರು ಈಗಲೂ ಸ್ಮರಿಸುತ್ತಾರೆ.

ಲಿಂ.ವೀರಭದ್ರ ಸ್ವಾಮಿಗಳ ಪೂರ್ವಾಶ್ರಮದ ಸಹೋದರನ ಮಗಳು ಶರಣೆ ಸಾವಿತ್ರಮ್ಮ, ಅಳಿಯ ಅಜ್ಜಣ್ಣ ಮತ್ತು ಮೊಮ್ಮಕ್ಕಳಾದ ಶರಣೆ. ಪ್ರತಿಭಾ ಹಾಗೂ ವೀಣಾ ಅವರುಗಳು ಪೂಜ್ಯರ ಕುರಿತು ಅಪಾರವಾದ ಭಕ್ತಿ ಇರಿಸಿಕೊಂಡಿದ್ದಾರೆ. ತಮ್ಮ ದೀಕ್ಷಾ ಗುರುಗಳೂ ಆಗಿರುವ ಪೂಜ್ಯ ಸ್ವಾಮಿಗಳ ಅಮೃತಶಿಲಾ ಪುತ್ಥಳಿಯನ್ನು ಪ್ರತಿಷ್ಠಾಪನೆ ಮಾಡಿಸಬೇಕೆಂಬುದು ಆ ಕುಟುಂಬ ವರ್ಗದವರ ಸಂಕಲ್ಪವಾಗಿತ್ತು. ಮೊದಲಿನಿಂದಲೂ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರೇ ಆಗಿರುವ ಇವರು ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ಮೂಲಕ ಅಮೃತಶಿಲಾ ಪುತ್ಥಳಿಯನ್ನು ತರಿಸಿಕೊಂಡು ಜೂನ್ 8ರಂದು ಪ್ರತಿಷ್ಠಾಪನೆ ಹಾಗೂ ಸಂಸ್ಮರಣಾ ಕಾರ್ಯಕ್ರಮ ಆಯೋಜಿಸಿದ್ದರು.

ಪೂಜ್ಯ ವೀರಭದ್ರ ಸ್ವಾಮಿಗಳು ತಮ್ಮ ಜೀವಿತಾವಧಿಯಲ್ಲಿ ತಮ್ಮ ಪೂರ್ವಾಶ್ರಮದ ಜಮೀನಿನಲ್ಲಿಯೇ ಮಠವನ್ನು ನಿರ್ಮಿಸಿಕೊಂಡಿದ್ದು, ಆ ಮಠಕ್ಕೆ ಈಗ ಬೇರೆ ಒಬ್ಬ ಕಾವಿಧಾರಿ

ಸ್ವಾಮಿಗಳನ್ನು ಗ್ರಾಮಸ್ಥರು ವ್ಯವಹಾರಗಳನ್ನು ನೋಡಿಕೊಳ್ಳಲು ಬಿಟ್ಟಿದ್ದಾರೆ. ಮೂರ್ತಿ ಪ್ರತಿಷ್ಠಾಪನಾ ಸಮಯದಲ್ಲಿ ನಾವು ಗುರು ಬಸವಣ್ಣನವರ ಪೂಜೆ, ಮಂತ್ರಪಠಣ, ಪುಷ್ಪವೃಷ್ಟಿ ಹಾಗೂ ಮಂಗಳಾರತಿ ಮಾಡಿ ನಂತರ ಲಿಂ.ವೀರಭದ್ರಪ್ಪ ಸ್ವಾಮಿಗಳ ಮೂರ್ತಿಗೆ ಪೂಜೆ, ಪುಷ್ಪವೃಷ್ಟಿ ಮಾಡಿಸಿದೆವು. ಆಗ ಆ ಮಠದ ಸ್ವಾಮಿಗಳ ಮುಖದಲ್ಲಿ ಒಂದಿಷ್ಟು ಪ್ರಸನ್ನತೆಯಾಗಲಿ, ಭಕ್ತಿ-ಭಾವವಾಗಲಿ ಯಾವುದೂ ಕಾಣಲಿಲ್ಲ. ಅವರ ಮುಖವನ್ನು ನೋಡಿ ತುಂಬ ಖೇದವೆನಿಸಿತು.

ಆಗ ನಾನು, "ಸ್ವಾಮೀಜಿ ತಾವು ಇದೇ ರೀತಿ ಪೂಜೆ ಎಲ್ಲ ಮಾಡ್ತಿರಬಹುದಲ್ಲಾ?" ಎಂದು ಕೇಳಿದೆ. ಆಗ ಅವರು ಇಲ್ಲ ಇಲ್ಲ ನಮ್ಮದೆಲ್ಲ ವೈದಿಕ ಪದ್ಧತಿ ಎಂದರು. ಆಗ ನನಗೆ ಸ್ಫುರಣವಾಗಿದ್ದೇನೆಂದರೆ ವೈದಿಕ ಧರ್ಮವೇ ಬೇರೆ; ಲಿಂಗಾಯತ ಧರ್ಮವೇ ಬೇರೆ. ವೈದಿಕ ಧರ್ಮ ಪ್ರಚಾರ ಮಾಡುವ ಸ್ವಾಮಿಗಳು ಸಾಕಷ್ಟಿದ್ದಾರೆ. ಆದರೆ ಗುರು ಬಸವಣ್ಣನವರು ಕೊಟ್ಟಿರುವ ಇಷ್ಟಲಿಂಗವನ್ನು ಧರಿಸಿಕೊಂಡು ಲಿಂಗಾಯತ ಧರ್ಮದ ಪ್ರಚಾರ ಮಾಡುವುದು ಬಿಟ್ಟು ವೈದಿಕ ಧರ್ಮದ ಪ್ರಚಾರ ಮಾಡುವುದು, ಆಚರಣೆ ಮಾಡುವುದು ಯಾವ ನ್ಯಾಯ ?

ಇದು ಹೇಗೆಂದರೆ ಬಿಜೆಪಿಯ ಮುಖಂಡರು ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಪ್ರಚಾರ ಮಾಡಿದಂತೆ ಹಾಗೂ ಕನ್ನಡ ಶಾಲೆಗಳಿಗೆ ಉರ್ದು ಶಿಕ್ಷಕರನ್ನು ನೇಮಕ ಮಾಡಿದಂತೆ ಸ್ವಧರ್ಮಕ್ಕೆ ದ್ರೋಹ ಬಗೆದಂತೆ. ಆದ್ದರಿಂದ ಇನ್ನು ಮುಂದೆ ಲಿಂಗಾಯತ ಬಂಧುಗಳು ಎಚ್ಚೆತ್ತುಕೊಳ್ಳಬೇಕು. ಮಠಗಳಿಗೆ ಪಟ್ಟಾಧಿಕಾರ ಮಾಡುವಾಗ ವಿಶ್ವಗುರು ಬಸವಣ್ಣನವರನ್ನು ಧರ್ಮಸ್ಥಾಪಕರೆಂದು ನಂಬಿದವರನ್ನು ಮಾತ್ರ ಮಾಡಬೇಕು. ಶಿವಯೋಗ ಮಂದಿರ ಅಥವಾ ಕಾಶಿಯಲ್ಲಿ ವೈದಿಕ -ಶೈವದ ತರಬೇತಿ ಪಡೆದ ವಟುಗಳು ಲಿಂಗಾಯತ ಧರ್ಮದ ವಿಧಿ -ವಿಧಾನ ಮಾಡಲು ಸಾಧ್ಯವಿಲ್ಲ. ವಚನ ಸಾಹಿತ್ಯದ ಸಂಸ್ಕಾರ ಹೊಂದಿದವರನ್ನು ಮಾತ್ರ ಮಠಗಳಿಗೆ ನೇಮಿಸುವುದು ಸೂಕ್ತ.

ವಚನ ಬಿಂದು :

- ಮಾತಾಜಿ

ಚೆಲುವಿಕೆ ಎಲ್ಲಿದೆ ?

ಅಂಗಕ್ಕೆ ಆಚಾರವೇ ಚೆಲುವು; ಮನಕ್ಕೆ ಮಹಾನುಭಾವವೇ ಚೆಲುವು
ಆತ್ಮಂಗೆ ಅರುಹೇ ಚೆಲುವು; ಅಖಂಡೇಶ್ವರನೆಂಬ ನಿಜವಿಂಬುಗೊಂಡವಂಗೆ
ಶರಣರ ಸಂಗವೇ ಚೆಲುವು. - ಜೇವರ್ಗಿ ಷಣ್ಮುಖ ಸ್ವಾಮಿಗಳು

ವ್ಯಕ್ತಿಯ ಶರೀರಕ್ಕೆ ಚೆಲುವಿಕೆ ಕೊಡುವುದು ಯಾವುದು? ಸದಾಚಾರ ! ದಿನ ನಿತ್ಯ ಸ್ನಾನ ಮಾಡುವುದು; ಶುಚಿಯಾಗಿರುವುದು; ಸ್ವಚ್ಛವಾಗಿರುವುದು; ನಿತ್ಯವೂ ಸುಪ್ರಭಾತದಲ್ಲಿ ಪೂಜೆ ಮಾಡುವುದು; ಅಷ್ಟಾವರಣಗಳನ್ನು ಧರಿಸುವುದು. ಇದೆಲ್ಲವೂ ಆಚಾರದ ಅಂಗ. ಆಚಾರ ಸಂಪನ್ನನಾದ ವ್ಯಕ್ತಿ ಸಜ್ಜನರ ಗೌರವ -ಆದರಗಳಿಗೆ ಪಾತ್ರನಾಗುತ್ತಾನೆ. ಮನಸ್ಸಿಗೆ ಪರಮಾತ್ಮನ ದಿವ್ಯಾನುಭಾವವೇ ಚೆಲುವು. ಭೌತಿಕ ಸುಖಗಳಿಂದ ಮನಸ್ಸನ್ನು ತೃಪ್ತಿ ಮಾಡಲು ಹೋದರೆ ಅದಕ್ಕೆ ತೃಪ್ತಿಯಾಗದು. ಜೇನ್ನೊಣವನ್ನು ಜೇನು ತುಪ್ಪದಲ್ಲಿ ಅದ್ದಿದರೆ ಅದಕ್ಕೆ ಖುಷಿಯಾಗದು. ಅದು ಸ್ವೇಚ್ಛೆಯಿಂದ ಹಾರಾಡಿ ಹೂವಿನೊಳಗಣ ಮಕರಂದವನ್ನು ಪಾನ ಮಾಡಿದರೆ ಮಾತ್ರ ಆನಂದದಿಂದ ಮೈಮರೆಯುವುದು. ಹಾಗೆ ಮನವೆಂಬ ಭ್ರಮರ ದೇವನ ದಿವ್ಯಾನುಭವದ ಮಕರಂದವನ್ನು ಪಾನ ಮಾಡಿದರೆ ಮಾತ್ರ ಆನಂದ ಹೊಂದುವುದು. ಆತ್ಮನ ಸ್ವಭಾವವೇ ಅರಿವು ಅಥವಾ ಚಿತ್. ಅದು ಆಂತರಿಕವಾಗಿ ಪರಂಜ್ಯೋತಿಯಾಗಿ ಬೆಳಗುವುದು. ಅದಕ್ಕೇ ಅಂತರಾತ್ಮದ ಬೆಳಕು ಎನ್ನುವುದು. ಸುಜ್ಞಾನಿಗೆ, ದೇವನ ಒಲುಮೆ ಪಡೆದವನಿಗೆ ಜ್ಞಾನ -ಅನುಭಾವಗಳ ಆಗರವಾದ ಶರಣರ ಸಂಗವೇ ಚೆಲುವು. ಶರಣರ ಒಡನಾಟದಿಂದ ದಿವ್ಯಜ್ಞಾನವು ಪ್ರಾಪ್ತಿಯಾಗುವುದಲ್ಲದೆ ಜೀವನವು ಪರಿಪೂರ್ಣವಾಗುವುದು.



ಸತ್ನಾಮ್ ಸಿಂಗ್ ಉಪ್ಪಲ್ ಮತ್ತು ಮೋಹನ್ ದಾಸ್ ವಿಲಾಸವತಿ ದಾಸ್ ಅವರಿಂದ ಸತ್ಕಾರ





CPMG/ KA/BGW-50/2009-2011, R.N.I. No.19980/70, Pages-32